(ಶ್ರೀ ಎಚ್. ಹುಚ್ಚಮಾಸ್ತಿಗೌಡ.)
ಅಪ್ಪಣೆ ಪಡೆದು ಈ ವರದಿಯನ್ನು ಸಭೆಯ ಮುಂದೆ ಇಡುತ್ತೇನೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ಸಭೆ ಅಪ್ಪಣೆ ಕೊಡದೆ ಇದ್ದರೆ, ಅದನ್ನು ಒಂದು ದಿವಸ ಮುಂಚೆ ಯಾತಕ್ಕೆ ತೆಗೆದುಕೊಳ್ಳಲಿಲ್ಲ? Chairmanಇಲ್ಲದಿದ್ದರೆ ಒಬ್ಬ ಮೆಂಬರು ವರದಿ ಮಂಡಿಸಬಹುದು ಎಂದು ಈ ರೀತಿ ಹೊಸ ನಿಯಮಗಳನ್ನು ಅನುಸರಿಸುವುದಾದರೆ ನಾನು ಏನು ಹೇಳುವುದಕ್ಕೂ ಆಗುವುದಿಲ್ಲ.

Mr. SPEAKER.—So far as the previous matter is concerned, under rule 68 (1) any member of the Select Committee can present the Report.

Sri Mulka GOVINDA REDDY.—The point is whether any extension of time was given. He was pleading that it might be condoned.

*Sri A. BHEEMAPPA NAIK (Molakalmuru).—Sir, I was about to submit that the power under rule 68 is given to the Speaker to permit. Since the Committee meeting was over yesterday evening, today, this is the earliest time to present the Report. Therefore, there is no question of any objection being tenable.

*Sri M. LINGANNA —Here, of course, the question as to the admissibility or otherwise of the Bill or the far-reaching powers of the Speaker are not questioned. The question here is that the Mover of Report of the Select Committee did not seek permission of the Chair to introduce the Bill to the effect that he could not present it yesterday.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—"ಅಪ್ಪಣೆ ಪಡೆದು" ಎಂದು ಆಗಲೇ ಸ್ಪಷ್ಟವಾಗಿ ಹೇಳಿದ್ದೇನೆ.

Sri M. LINGANNA.—It was only when Sri Mulka Govinda Reddy took objection that the Hon'ble Member sought for permission. He never sought permission earlier to present the report. Now, after moving the presentation motion, he has stated that he had formally requested the Chair outside the House to place the Report today before the House. I am afraid that such a procedure may not be conducive to good parliamentary procedure. We have no objection to his presenting the Report with the permission of the Chair. We are not afraid to discuss the Report of the Select Committee. By raising this particular point, we are not putting any obstacle to proceed with the discussions on the Select Committee Report. Here is a point where the mover has not sought the permission regularly from the Chair to introduce the Report of the Select Committee though time had lapsed. That is entirely in the hands of the Chair to decide. As far as my knowledge goes, there is nothing provided in the procedure to regularise such lacunae either by the Chairman of the Select Committee or any other member of the Select Committee.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಪ್ರಾರಂಭದಲ್ಲೇ ಈ ವರದಿಯನ್ನು ಮಂಡಿಸುವುದಕ್ಕೆ ಅಪ್ಪಣೆ ಕೊಡಬೇಕೆಂದು ಸೂಚನೆ ಮಾಡಿದ್ದೆ.

*Sri M. MADIAH (Nanjangud—Scheduled Castes).—Regarding the point of order, when the Hon'ble Member who presented the Select Committee Report did so with the permission of the Chair to present the same, nobody took objection that he did not seek permission. The presentation of the Report of the Select Committee is included in the agenda for today. The Hon'ble Member of the Select Committee sought for your permission to present the Report. So, there is no point of order raised by Sri Linganna.

Mr. SPEAKER.—The point is this. The objection raised is that the Hon'ble Member who presented the Report of this Bill did not seek the permission of the Chair and did not make a statement to that effect. Of course, he sought my permission before. It would have been better if he had made that statement in the House. Since the House adjourned before five o'clock yesterday, I have permitted him to present it today.

DEBATE ON THE FACT FINDING COMMITTEE REPORT.

*ಶ್ರೀ ಎಚ್. ಸಿ. ನಾಗಯ್ಯರೆಡ್ಡಿ (ಗೋರಿಬಿದನೂರು).—ಸರ್ಕಾರದವರು Fact Finding ಕಮಿಟಿಯ ವರದಿ ಮೇಲೆ ಒಂದು motion ಇಟ್ಟಿಲ್ಲ. ಅಥವಾ ಒಂದು formal resolution ಇಟ್ಟಿಲ್ಲ. ನೀವು ನೀವು ಕಿತ್ತಾಡಿಕೊಳ್ಳಿ ಎಂದು ಈ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರಿಂದ ನಮಗೆ ಏನು ಪ್ರಯೋಜನವಾಗುತ್ತದೋ ಗೊತ್ತಾಗುವುದಿಲ್ಲ. ಪತ್ರಿಕೆಗಳಲ್ಲಿ ಬರುತ್ತದೆ ಎಂದು ನಾವು ಇಲ್ಲ ಮಾತನಾಡುತ್ತಿದ್ದೇವೆ. ನಮ್ಮ ಅಭಿಪ್ರಾಯಗಳನ್ನು ಇಲ್ಲ ಹೇಳುವುದಾದರೆ ಅದನ್ನು ಕೇಳುವವರು ಯಾರು

ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಈ ಸಭೆಯ ಸಮಯ ಬಹಳ ಅಮೂಲ್ಯವಾದುದು. ಇದನ್ನು ಏತಕ್ಕೆ ಹೀಗೆ ವ್ಯಥಾ ಕಳೆಯಬೇಕೋ ಗೊತ್ತಿಲ್ಲ. If it is in the form of a resolution then we can express our views which could be conveyed to the Commission. ಆದ ಕಾರಣ ಈ ವರದಿಯ ಚರ್ಚೆಗೆ ಏತಕ್ಕೆ ಹೆಚ್ಚು ಕಾಲ ತೆಗೆದುಕೊಳ್ಳಬೇಕೋ ಗೊತ್ತಿಲ್ಲ. If they are very fond of hearing their own voice, ನನ್ನ ಆಕ್ಷೇಪಣೆ ಏನೂ ಇಲ್ಲ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಈ ರಿಪೋರ್ಟ್ ಅಲ್ಲದೆ ಕೆ.ಜಿ.ಎಫ್. ಮತ್ತು ಮೈನಿಂಗ್ ಕಂಪೆನಿಗಳ ರಿಪೋರ್ಟು ಕೂಡ ಇದೇ ರೀತಿ ಚರ್ಚೆ ಮಾಡಲ್ಪಟ್ಟಿತು. ಆಗಲೂ ಏನೂ ನಿರ್ಣಯವನ್ನು ಸಭೆಯ ಮುಂದಿಟ್ಟಿರಲಿಲ್ಲ. ಅದರಮೇಲೆ ಚರ್ಚೆ ನಡೆಯಿತು. ಮುಂದೆ ಅದರ ವಿಚಾರದಲ್ಲಿ ಏನು ಬೇಕಾದರೂ ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ರಿಪೋರ್ಟಿನಮೇಲೂ ಚರ್ಚೆ ನಡೆಸುವುದರಲ್ಲೇನೂ ತಪ್ಪಿಲ್ಲ. ಚರ್ಚೆಯಾದ ನಂತರ, ಮುಂದೇನು ಮಾಡಬೇಕು, ಒಂದು ನಿರ್ಣಯ ವನ್ನಿಡಬೇಕಾಗಿದೆಯೇ ಎಂಬುದನ್ನು ತೀರ್ಮಾನ ಮಾಡಬಹುದು. It is left to the House later to decide. But so far as the discussions are concerned, the subject is on the agenda and we ought to discuss.

Mr. SPEAKER.—Anyhow there is limited time at our disposal. Therefore, I would request the Hon'ble Members to be very brief and also refer to relevant points and not the points which were already covered by some members.

Sri V. VENKATAPPA (Channapatna).—It is only for today or tomorrow also?

Mr. SPEAKER.—I think we have to sit even after 5 o'clock sometimes.

Sri V. VENKATAPPA.—Are we discussing the Report only today or tomorrow also?

Mr. SPEAKER.—It is to be seen. I may tell you tomorrow.

Sri J. MOHAMED IMAM (Jagalur).—I have got a very strong objection, Sir. I would like to know who is the Minister in-charge of this Report? Last time it was introduced by Dr. Nagan Gowda, he is absent; and the Chief Minister who is in overall charge of everything, he is absent and the other three Ministers who are present here are helpless.

Sri Kadidal MANJAPPA (Minister for Revenue and Public Works).—I very strongly object to the words spoken by the Leader of the Opposition, Sir.

Sri J. MOHAMED IMAM.—I think the Chief Minister must answer all these questions and his absence handicaps a good deal. At least Dr. Nagan Gowda must be present because it is he who introduced this Report. Somebody must be here to give authoritative answers.

Sri H. SIDDAVEERAPPA (Minister for Home and Industries).—The agenda had provided for discussion for tomorrow also.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಈ ಸಭೆಯ ಮುಂದಿರತಕ್ಕ ರಾಜ್ಯಗಳ ಪುನರ್ವಿಂಗಡಣಾ ಸಂಬಂಧದಲ್ಲಿ ನೇಮಕವಾಗಿದ್ದ ಅಂಕಿ ಅಂಶಗಳ ಪರಿಶೀಲನಾ ಸಮಿತಿಯವರು ಕೊಟ್ಟಿರುವ ವರದಿಯನ್ನು ಪರಿಶೀಲಿಸುವಾಗ ಯಾವ ಉದ್ವೇಗಗಳಿಗೂ ಅವಕಾಶ ಕೊಡದೆ, ಅಂಕಿ ಅಂಶಗಳಿಂದ ಯಾವ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವೋ ಅಂಥ ಅಭಿಪ್ರಾಯಗಳನ್ನೇ ವ್ಯಕ್ತಪಡಿಸಬೇಕಾದದ್ದು ಅತ್ಯಗತ್ಯ. ಕೆಲವು ಸಮಯದಲ್ಲಿ ಮಾತನಾಡುವಾಗ ಉದ್ರೇಕಕ್ಕೆ ಅವಕಾಶಕೊಟ್ಟು ಅಂಕಿ ಅಂಶಗಳಿಂದ ಯಾವ ಅರ್ಥ ಹೊರಬೀಳುವುದಿಲ್ಲವೋ ಆ ಅರ್ಥವನ್ನು ಹೇಳುವ ಸಂಭವ ಕೂಡ ಕೆಲವುವೇಳೆ ಬಂದಿದೆ. ಆದರೂ ಈ ಸಭೆಯ ಮುಂದೆ ಹಿಂದೆ ಎರಡು ದಿನಗಳು ಚರ್ಚೆಯಾದಾಗ ವ್ಯಕ್ತವಾದ ಅಭಿಪ್ರಾಯ ದೇಶದಲ್ಲಿ ಈ ಅಂಕಿ ಅಂಶಗಳಿಂದ ಯಾವ ತೀರ್ಮಾನಕ್ಕೆ ಬರಬಹುದೆಂಬುದಕ್ಕೆ ಬಹುಮಟ್ಟಿಗೆ ಸಾಧಕವಾಗಿತ್ತೆಂದು ನಾನು ಭಾವನೆ ಮಾಡುತ್ತೇನೆ. ಈ ಸಮಿತಿಯನ್ನು ಸರ್ಕಾರದವರು ರಚಿಸುವುದಕ್ಕೆ ಪೂರ್ವಭಾವಿಯಾಗಿ ನಮ್ಮ ಮುಂದೆ ಖಚಿತವಾದ ಅಂಕಿ ಅಂಶಗಳು ಇರಲಿಲ್ಲ. ಚರಿತ್ರೆಯ ಆಧಾರದಮೇಲೆ ನಮ್ಮ ನಮ್ಮ ಮನೋಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೆವು. ಆದರೆ, ಸರ್ಕಾರದವರು ಈ ಸಮಿತಿಯನ್ನು ರಚಿಸಿ, ಸಮಿತಿಯ ವರದಿ ಬಂದಮೇಲೆ ಪರಿಸ್ಥಿತಿ ಬದಲಾವಣೆಯಾಗಿದೆಯೆಂದು ನಾನು ತಿಳಿಯುತ್ತೇನೆ. ಈ ಸಮಿತಿಯಲ್ಲಿದ್ದ ಸದಸ್ಯರು ಮತ್ತು ಅಧ್ಯಕ್ಷರು ಆಡಳಿತದಲ್ಲಿ ಅನುಭವವುಳ್ಳವರಾಗಿದ್ದು ಒಂದು ತುಲನಾತ್ಮಕ ದೃಷ್ಟಿಯಿಂದ ಅಂಕಿ ಅಂಶಗಳನ್ನು ಅರಿಸಿ ಒಂದು ವರದಿಯ ರೂಪದಲ್ಲಿ ನಮಗೆ ಕೊಟ್ಟು ಹೆಚ್ಚಿನ ಉಪಕಾರ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಈ ವರದಿಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಗಳು ನಾವು ತೀರ್ಮಾನಕ್ಕೆ ಬರುವುದಕ್ಕೆ ಬಹಳ ಅನುಕೂಲವಾಗಿವೆ. ಇದರಲ್ಲಿರುವ ವಿಷಯಾನುಕ್ರಮಣಿಕೆಯನ್ನು ನೋಡಿದರೆ, ಎರಡನೆಯ ಮತ್ತು ಮೂರನೆಯ ಅಧ್ಯಾಯಗಳಲ್ಲಿ ಭೂಗೋಳಶಾಸ್ತ್ರಕ್ಕೆ ಸಂಬಂಧಪಟ್ಟಿದ್ದನ್ನು ಬಿಟ್ಟರೆ, ಮಿಕ್ಕ ಭಾಗಗಳಲ್ಲಿ ಸಂಚಾರ ಮಾರ್ಗಗಳು, ವಿದ್ಯಾಭ್ಯಾಸ, ವೈದ್ಯಸಹಾಯ, ಜನಾರೋಗ್ಯ ರಕ್ಷಣೆ, ವ್ಯವಸಾಯ, ಪಶುಪಾಲನೆ, ಸಹಕಾರ, ಗ್ರಾಮಾಭಿವೃದ್ಧಿ, ನಿರಾವರಿ, ವಿದ್ಯುಚ್ಛಕ್ತಿ, ಪ್ರಕೃತಿ ಸಂಪತ್ತು, ಪಾಂಚವಾರ್ಷಿಕ ಯೋಜನೆ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಂತೆ ಆದಾಯ, ವೆಚ್ಚ ಮತ್ತು ಆಡಳಿತ ಸಂಬಂಧವಾದ ಸಮಸ್ಯೆಗಳನ್ನು ಕೊಟ್ಟಿದೆ. ಈ ಅಧ್ಯಾಯಗಳಲ್ಲಿ ಯಾವ ಯಾವ ಭಾಗಗಳನ್ನು ಯಾವ ವಾಗ್ವಾದಕ್ಕೂ ಅವಕಾಶವಿಲ್ಲದೆ ಕನ್ನಡ ಪ್ರದೇಶವೆಂದು ಹೇಳಬಹುದೋ ಆ ಭಾಗಗಳನ್ನು ತೆಗೆದುಕೊಂಡು, ಆ ಭಾಗಗಳಿಂದ ಎಷ್ಟು ಉತ್ಪತ್ತಿಯಿದೆ, ಎಷ್ಟು ಖರ್ಚಿದೆ, ಅಲ್ಲಿ ಜನೋಪ

(ಶ್ರೀ ಕೆ. ಪುಟ್ಟಸ್ವಾಮಿ.)

ಯುಕ್ತವಾದ ಸೌಲಭ್ಯಗಳು ಎಷ್ಟರಮಟ್ಟಿಗಿವೆ, ಒಂದು ಪಕ್ಷ ಅವು ಮೈಸೂರು ಸಂಸ್ಥಾನಕ್ಕೆ ಸೇರುವುದಾದರೆ ಉದ್ಭವಿಸಬಹುದಾದ ಸಮಸ್ಯೆಗಳೇನು, ಮೈಸೂರು ಸಂಸ್ಥಾನದಲ್ಲಿರುವಷ್ಟುಮಟ್ಟಿಗೆ ಬೇರೆಕಡೆ ಸೌಲಭ್ಯ ಗಳನ್ನೇರ್ಪಡಿಸಬೇಕಾದರೆ ಎಷ್ಟು ಹಣ ಖರ್ಚು ಮಾಡ ಬೇಕಾಗುತ್ತದೆಂಬ ವಿಚಾರಗಳನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ.

ಈ ವಿಚಾರವನ್ನು ಚರ್ಚೆ ಮಾಡುವಾಗ ಬಹು ಮುಖ್ಯವಾಗಿ ಪತ್ರಿಕೆಯಲ್ಲಿ ಬಂದಿದ್ದಂಥ ಮೂರು ಲೇಖ ನಗಳನ್ನು ಪ್ರಸ್ತಾಪ ಮಾಡಿದರೆ ಅನುಚಿತವಾಗಲಾ ರದು. ಇವು ಶ್ರೀ S. R. ಕಂಠಿಯವರು ಬರೆದಿರುವ ಲೇಖನಗಳು. ಸರ್ಕಾರದಿಂದ ನಿಯಮಿತವಾದ ಒಂದು ಸಮಿತಿಯನ್ನು ನೆರೆಹೊರೆಯ ಸರ್ಕಾರಗಳಿಂದ ಅಧಿಕೃತ ವಾದ ಅಂಕಿ ಅಂಶಗಳನ್ನು ಶೇಖರಣೆಮಾಡಿ ತಮ್ಮ ಅಭಿ ಪ್ರಾಯವನ್ನು ಅಂಕಿ ಅಂಶಗಳ ಆಧಾರದಮೇಲೆ ಒಂದು ನಿರ್ದಿಷ್ಟ ರೂಪದಲ್ಲಿ ವರದಿಯ ಮೂಲಕ ಕೊಟ್ಟಿ ದ್ದರೆ, ಅದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಪತ್ರಿಕೆಗಳಲ್ಲಿ ಬಂದಿದ್ದಂಥ ಈ ಲೇಖನಗಳಿಗೆ ಮಾನ್ಯತೆಕೊಟ್ಟು ಈ ಸಭೆಯಲ್ಲಿ ಕೆಲವು ಭಾಷಣಗಳಾಗಿವೆ. ಆದ್ದರಿಂದ ಈ ವರದಿಯನ್ನು ಪರಿಶೀಲನೆ ಮಾಡುವಾಗ ನಾವು ಶ್ರೀ ಕಂಠಿಯವರ ಅಭಿಪ್ರಾಯವನ್ನೂ ಕೂಡ ಇಲ್ಲಿ ಉಲ್ಲೇ ಖಿಸಬೇಕಾಗಿರುವುದು ಅನಿವಾರ್ಯವಾಗಿದೆ.

ಮೊದಲನೆಯದಾಗಿ ಒಂದು ದೊಡ್ಡ ಸಮಸ್ಯೆ ಯನ್ನು ಶ್ರೀ ಕಂಠಿಯವರು ಎತ್ತಿದ್ದಾರೆ. ಆ ಶೇಷಾದ್ರಿ ಸಮಿತಿಯವರು ತಮ್ಮ ವರದಿಯಲ್ಲಿ "ನಮ್ಮ ಅಭಿ ಪ್ರಾಯದ ಪ್ರಕಾರ ಕನ್ನಡ ಪ್ರದೇಶವೆಂದು ಸ್ಪಷ್ಟವಾಗಿ ತಿಳಿಯಬಹುದಾದ ಪ್ರದೇಶದ ವಿಸ್ತೀರ್ಣ 42,827 ಚದರ ಮೈಲಿಗಳು, ಈ ಪ್ರದೇಶದ ಒಟ್ಟು ಜನ ಸಂಖ್ಯೆ ಒಂದು ಕೋಟಿ 67 ಲಕ್ಷ ಚಿಲ್ಲರೆ; ಇದರಲ್ಲೊಕಿ 70,10,896 ಮಂದಿಗಳು ಕನ್ನಡ ಭಾಷೆಯನ್ನು ತಮ್ಮ ಮಾತೃಭಾಷೆಯನ್ನಾಗಿ ಆಡುತ್ತಾರೆಂದು ಹೇಳ ಬಹುದು" ಎಂದು ಹೇಳಿದ್ದಾರೆ. ಇಷ್ಟನ್ನು ಮಾತ್ರ ನಿರ್ದಿಷ್ಟವಾಗಿ ಕನ್ನಡ ಪ್ರದೇಶವೆಂದು ಹೇಳಬಹುದೆಂದು ತಿಳಿಸಿದ್ದಾರೆ. ಈ ವಿಷಯವನ್ನು ಶ್ರೀ ಕಂಠಿಯವರು: "ಸರಿಯಲ್ಲ, ಈ ಸಮಿತಿಯವರು ಬಹಳ ಅನ್ಯಾಯ ಮಾಡಿದ್ದಾರೆ, ಆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯವರು ರಾಜ್ಯಪುನರ್ನಿರ್ಮಾಣ ಸಮಿತಿಯ ವರಿಗೆ ಒಪ್ಪಿಸಿರತಕ್ಕಂಥ ವರದಿಯಲ್ಲಿ 52 ಸಾವಿರದ 500 ಚದರ ಮೈಲಿ ವಿಸ್ತೀರ್ಣ ಉಳ್ಳದಾಗಿದ್ದು ಸುಮಾರು ಎರಡು ಕೋಟಿ ಚಿಲ್ಲರೆ ಪ್ರಜಾಸಂಖ್ಯೆ ಇರು ವಷ್ಟು ಕರ್ನಾಟಕ ಭಾಗ ಆಗುತ್ತದೆ" ಎಂದು ತಿಳಿಸಿ ದ್ದಾರೆ. ಶೇಷಾದ್ರಿ ಸಮಿತಿಯವರು ಈ ವಿಷಯಗಳ ನ್ನೆಲ್ಲಾ ಪರಿಶೀಲನೆ ಮಾಡುವಾಗ ಒಂಬತ್ತು ಸಾವಿರ ಚದರ ಮೈಲಿ ಪ್ರದೇಶದಲ್ಲಿರತಕ್ಕಂಥ ಸುಮಾರು 23 ಲಕ್ಷ ಪ್ರಜಾ ಸಂಖ್ಯೆಯುಳ್ಳ ಬೇರೆ ಪ್ರಾಂತ್ಯ ಗಳು ಇದಕ್ಕೆ ಸಂಬಂಧಪಡುವುದಿಲ್ಲವೆಂದು ಭಾವಿ ಸಿಕೊಂಡು, ಶ್ರೀ ಕಂಠಿಯವರು ಈ ಸಮಿತಿ ಯವರು ಈ ವಿಚಾರದಲ್ಲಿ ಬಹಳ ಅನ್ಯಾಯ ಮಾಡಿ ದ್ದಾರೆ ಎಂದು ಹೇಳಿದ್ದಾರೆ. ನಾವು ಈ ವರದಿಯಲ್ಲಿರುವ ಮೊದಲನೆಯ ಅಧ್ಯಾಯವನ್ನು ನೋಡಿದರೆ ಹಿಂದೆ ಯಾವುದೋ ಒಂದು ಭಾವನೆಯಿಂದ ಮಾಡಿರತಕ್ಕಂಥ ಉದ್ದೇಶಕ್ಕಾಗಿ ಈಗ ಈ ಪ್ರಾಂತ್ಯಗಳನ್ನೆಲ್ಲಾ ಒಟ್ಟು ಕೂಡಿಸಬೇಕೆಂಬ ಒಂದು ವಾದವನ್ನು ಹೂಡಿದ್ದಾರೆ. ಆದರೆ ಇವರು ಹೂಡಿರತಕ್ಕಂಥ ವಾದ ಸತ್ಯಾಂಶಕ್ಕೆ ಬಹಳ ದೂರವಾಗಿದೆ. ಶೇಕಡ 1, 1¼ ಯಿಂದ ಹಿಡಿದು ಶೇಕಡ 15ರವರೆಗೂ ಕನ್ನಡ ಭಾಷೆಯನ್ನಾಡತಕ್ಕಂಥ ಜನಗಳಿರುವ ಭಾಗವನ್ನೆಲ್ಲಾ ಕನ್ನಡ ಪ್ರದೇಶವೆಂದೂ, ಅವುಗಳೆಲ್ಲಾ ಕರ್ಣಾಟಕಕ್ಕೆ ಸೇರಬೇಕು ಎಂದೂ ವಾದ ಹೂಡಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—ಹಾಗೆ ಶ್ರೀ ಕಂಠಿಯವರು ಎಲ್ಲಿ ಶೇಕಡ ಒಂದರಿಂದ ಹದಿನೈದರ ತನಕ ಮಾತನಾಡತಕ್ಕಂಥ ಭಾಗವೆಲ್ಲಾ ಕನ್ನಡ ಪ್ರದೇಶವೆಂದು ಪರಿಗಣಿಸಬೇಕು ಎಂದು ಹೇಳಿದ್ದಾರೆ? ಹಾಗೆ ಅವರು ಎಲ್ಲಿ ಹೇಳಿದ್ದಾರೆ ಎಂಬುದಕ್ಕೆ ತಾವು ಸ್ವಲ್ಪ ಅವರ ಬರವಣಿಗೆಯನ್ನೇ ಓದಿದರೆ ಬಹಳ ಅನುಕೂಲವಾಗುತ್ತದೆಯಲ್ಲವೇ?

Sri J. MOHAMED IMAM.—When the member is not in the House to defend himself, it is the duty of the speaker to give all relevant facts so that they may be appreciated by the members of the House. There is no use of simply giving imaginary description.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಸ್ವಲ್ಪ ಸಹನೆಯಿಂದಿದ್ದರೆ ನಾನು ಎಲ್ಲದಕ್ಕೂ ಅಂಕಿ ಅಂಶ ಗಳನ್ನು ಕೊಡಬಲ್ಲೆ. ನಾನು ಯಾವಾಗಲೂ ನಿರಾ ಧಾರವಾದಂಥ ಮಾತುಗಳನ್ನು ಹೇಳತಕ್ಕಂಥವನಲ್ಲ, ಅಂಥ ನಿರಾಧಾರವಾದ ಹೇಳಿಕೆಯನ್ನು ಕೊಡುವುದಕ್ಕೆ ನಾನು ಸಿದ್ಧವಾಗಿಯೂ ಇಲ್ಲ. ತಾವುಗಳೆಲ್ಲರೂ ದಯ ವಿಟ್ಟು 169ನೆಯ ಪೇಜನ್ನು ಓದಿನೋಡಿ, ತಮಗೇ ಗೊತ್ತಾಗುತ್ತದೆ. ಗುಲ್ಬರ್ಗ ಜಿಲ್ಲೆಯಲ್ಲಿರುವ ತಂಡೂರ್ ಮತ್ತು ಕೋಡಂಗಲ್‌ನಲ್ಲಿ ಕನ್ನಡ ಮಾತ ನಾಡತಕ್ಕಂಥವರ ಶೇಕಡಾವಾರು ಸಂಖ್ಯೆ 1·1 ಇದೆ. ಬೀದರೆ ಡಿಸ್ಟ್ರಿಕ್ಟಿನಲ್ಲಿರುವ ನಿಲಂಗದಲ್ಲಿ ಕನ್ನಡ ಮಾತ ನಾಡತಕ್ಕಂಥವರ ಸಂಖ್ಯೆ ಶೇಕಡ 6 ಇದೆ, ಮತ್ತು ಅಹಮದ್‌ಪುರದಲ್ಲಿ ಶೇಕಡ 1·3 ಇದೆ. ರಾಯಚೂರು ಜಿಲ್ಲೆಯಲ್ಲಿರುವ ಗದ್ವಾಲ್ ಮತ್ತು ಅಲಂಪುರ ಪ್ರದೇ ಶದಲ್ಲಿ ಕನ್ನಡ ಮಾತನಾಡತಕ್ಕಂಥವರ ಶೇಕಡಾವಾರು ಸಂಖ್ಯೆ 2·5 ಇದೆ. ಸೊಲ್ಲಾಪುರ ಜಿಲ್ಲೆಯಲ್ಲಿರುವ ಸಾಂಗೋಲ, ಮಲಸಿರಸ ಇತ್ಯಾದಿ ತಾಲ್ಲೂಕುಗಳಲ್ಲಿ ಕನ್ನಡ ಮಾತನಾಡತಕ್ಕಂಥವರ ಸಂಖ್ಯೆ ಶೇಕಡ 1·5 ಇದೆ. ಮತ್ತು ಅದೇ ಜಿಲ್ಲೆಯ ಮಾಧಾ, ಕರ್ಮಾಳ ಮತ್ತು ಮೋಹಳ ತಾಲ್ಲೂಕುಗಳಲ್ಲಿ ಕನ್ನಡ ಮಾತನಾಡ ತಕ್ಕಂಥವರ ಜನಸಂಖ್ಯೆ ಶೇಕಡ 0·6 ಇದೆ. ಹೀಗೆಲ್ಲಾ ಪಾಸ್ತವಾಂಶವಿರುವುದಾಗಿ ಈ ವರದಿಯಲ್ಲಿ ತಿಳಿಸಿ ದ್ದಾರೆ. ಇನ್ನು ಆ ಸಾಂಗೋಲ, ಮಾಲಸಿರಸ, ಪಂಡ ರಾಪುರ ಮತ್ತು ಮಂಗಳವಾಡ ತಾಲ್ಲೂಕುಗಳಲ್ಲಿ ಪೌರಪ್ರದೇಶದಲ್ಲಿ ಕನ್ನಡ ಮಾತನಾಡತಕ್ಕಂಥವರ ಶೇಕಡಾವಾರು ಸಂಖ್ಯೆ 1·5 ಇದೆಯೆಂತಲೂ, ಮಾಧಾ ಮತ್ತು ಕರ್ಮಾಳ, ಮೋಹಳ ತಾಲ್ಲೂಕುಗಳಲ್ಲಿ ಕನ್ನಡ ಮಾತನಾಡತಕ್ಕವರ ಸಂಖ್ಯೆ ಶೇಕಡ 0·8 ಇದೆಯೆಂದೂ ತಿಳಿಸಿದ್ದಾರೆ. ಕೊಲ್ಲಾಪುರ ಜಿಲ್ಲೆಯ ಕೆಲವು ಪೌರ ಪ್ರದೇಶಗಳಿರುವ ಸ್ಥಳದಲ್ಲಿ ಈ ಕನ್ನಡ ಮಾತನಾಡುವ ವರ ಸಂಖ್ಯೆ ಶೇಕಡ 13·1 ಇದೆ. ಹಾಗೆ ನಾನು ಯಾವಾಗಲೂ ಅಂಕಿ ಅಂಶಗಳಿಲ್ಲದೆ ಮಾತನಾಡತಕ್ಕ ವನಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಈಗ ತಾವು ಓದಿ ದ್ದೆಲ್ಲಾ ಆ ಶೇಷಾದ್ರಿ ಸಮಿತಿ ವರದಿಯೇ ಹೊರತು ಶ್ರೀ ಕಂಠಿಯವರ ವರದಿಯನ್ನಲ್ಲ. ನಾನು ತಮಗೆ ಕೇಳಿದ್ದು ಶ್ರೀ ಕಂಠಿಯವರೇನಾದರೂ ತಾವಾಗಲೇ ಹೇಳಿದಂತೆ ಎಲ್ಲಿ ಆ ರೀತಿ ತಿಳಿಸಿದ್ದಾರೆ ಎನ್ನುವುದನ್ನು ಓದಿಹೇಳಿ ಎಂದು. ಆದ್ದರಿಂದ ಈಗ ತಾವು ಓದಿದ್ದು ಶ್ರೀ ಕಂಠಿಯವರ ಹೇಳಿಕೆಯಲ್ಲ ಅಲ್ಲವೇ?

Sri K. PUTTASWAMY.—I have not yielded to my Hon'ble friend. I can only yield on a point of order or when the Speaker calls me to resume my seat. Let it be clearly understood by my friend Sri Bheemappa Naik. Let him not go under the impression that he can cow down the members.

ಈಗ ಯಾವ ಮಾನ್ಯ ಸದಸ್ಯರು ನಾನು ಯಾವ ಅಂಕಿ ಅಂಶಗಳ ಆಧಾರವೂ ಇಲ್ಲದೆ ಮಾತನಾಡುತ್ತಿದ್ದಾರೆಂದು ತಿಳಿದುಕೊಂಡಿದ್ದಾರೋ ಅವರು ಮತ್ತೊಮ್ಮೆ ಈ ಶೇಷಾದ್ರಿ ಸಮಿತಿಯ ವರದಿಯಲ್ಲಿರತಕ್ಕಂಥ ಮೊದಲನೆಯ ಅಧ್ಯಾಯವೊಂದನ್ನೇ ಚೆನ್ನಾಗಿ ಓದಿದರೆ—ಆಗ ಅವರು ಇಷ್ಟೊಂದು ಕಳವಳವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿರುತ್ತಿರಲಿಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಎರಡನೆಯದಾಗಿ ನಾಲ್ಕನೆಯ ಅಧ್ಯಾಯದಲ್ಲಿ ಸಂಚಾರ ಮಾರ್ಗಗಳ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ಸಂಚಾರ ಮಾರ್ಗಗಳ ವಿಷಯವಾಗಿ ಮಾತನಾಡುತ್ತ ಮೊದಲೇ ನಾನು ಹೇಳಿರತಕ್ಕಂಥ ವಿಚಾರದಲ್ಲಿ ಮುಖ್ಯವಾಗಿ ಒಂದು ಅಂಶವನ್ನೀಗ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಮೊದಲನೆಯ ಅಧ್ಯಾಯದ ಕೊನೆಯ ಭಾಗದಲ್ಲಿ ಈ ಸಮಿತಿಯವರು ಹೇಳಿರತಕ್ಕದ್ದು ಹೀಗಿದೆ. "ಮೇಲ್ಕಂಡ ಸರ್ವೆ ಪರಿಶೀಲನೆಯಿಂದ, ಸರಹದ್ದುಗಳನ್ನು ಎಷ್ಟೇ ಜಾಗರೂಕತೆಯಿಂದ ನಿರ್ಧರಿಸಿದರೂ, ಭಾಷಾವಾರು ಆಧಾರದ ಮೇಲೆ ಜನರನ್ನು ವರ್ಗಾಯಿಸುವಂತೆ ನಾವು ಉದ್ದೇಶಿಸಿದ ಹೊರತು ಬೇರೆ ಬೇರೆ ಭಾಷೆಗಳನ್ನಾಡತಕ್ಕ ಅಲ್ಪಸಂಖ್ಯಾತರನ್ನು ಬಿಟ್ಟು ಬಿಡುವುದಕ್ಕೆ ಸಾಧ್ಯವಿಲ್ಲವೆಂಬುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಭಾಷಾವಾರು ಆಧಾರದಮೇಲೆ ಪ್ರದೇಶಗಳ ಪುನರ್ವಿಂಗಡಣೆಯ ಸಮಸ್ಯೆಯನ್ನು ಬಗೆಹರಿಸುವುದು ನಾವು ಭಾವಿಸುವಷ್ಟು ಸುಲಭ ಸಾಧ್ಯವಾದ ಸಮಸ್ಯೆಯಲ್ಲವೆಂಬುದು ನಮಗೆ ವ್ಯಕ್ತವಾಗುವುದು" ಎಂದು ಹೇಳಿದ್ದಾರೆ. ಇಷ್ಟು ಹೇಳಿದಮೇಲೆ ಈ ಸಮಿತಿಯವರು ಇನ್ನು ಈ ಸಂಚಾರ ಮಾರ್ಗಗಳ ವಿಚಾರವಾಗಿ, ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಸಂಚಾರ ಸೌಲಭ್ಯಗಳಿವೆ ಎನ್ನುವುವನ್ನು ಪರಿಶೀಲನೆ ಮಾಡಿದ್ದಾರೆ. ಈ ವಿಚಾರದಲ್ಲಿಯೂ ಸಮಿತಿಯವರು ಸಾಕಷ್ಟು ಅಂಕಿ ಅಂಶಗಳನ್ನು ನಮಗೆ ಒದಗಿಸಿದ್ದಾರೆ. ಪೇಜು 50ರಲ್ಲಿ ಇದನ್ನೆಲ್ಲಾ ಒಂದು ಗ್ರಾಫ್ ಮೂಲಕ ತಿಳಿಸಿದ್ದಾರೆ. ಹೈದರಾಬಾದ್, ಬೊಂಬಾಯಿ, ಮದ್ರಾಸು, ಕೊಡಗು ಇತ್ಯಾದಿ ಕನ್ನಡ ಪ್ರದೇಶಗಳಲ್ಲಿ ಪ್ರತಿ 100 ಚದರ ಮೈಲಿಗೆ ಎಷ್ಟು ಉದ್ದದ ರಸ್ತೆಯಿದೆಯೆಂಬುದನ್ನು ತಿಳಿಸಿದ್ದಾರೆ. ಹೈದರಾಬಾದಿನ ಕನ್ನಡ ಪ್ರದೇಶದಲ್ಲಿ ಪ್ರತಿ 100 ಚದರ ಮೈಲಿ ಪ್ರದೇಶಕ್ಕೆ ಶೇಕಡ 8·3 ಮೈಲಿಗಳಷ್ಟು ಉದ್ದದ ರಸ್ತೆಯಿರುತ್ತದೆಯೆಂದು ತಿಳಿಸಿದ್ದಾರೆ. ಬೊಂಬಾಯಿ ಪ್ರಾಂತ್ಯದಲ್ಲಿ ಪ್ರತಿ 100 ಚದರ ಮೈಲಿಗಳಿಗೂ ಶೇಕಡ 26·6 ಮೈಲಿಗಳಷ್ಟು ರಸ್ತೆ ಇದೆ. ಮದ್ರಾಸ್, ಸೌತ್_ಕ್ಯಾನರ, ಕೊಡಗು ಇತ್ಯಾದಿ ಪ್ರಾಂತ್ಯಗಳಲ್ಲಿ ಪ್ರತಿ 100 ಚದರ ಮೈಲಿಗಳಿಗೂ 26 ಮೈಲಿಗಳಷ್ಟು ರಸ್ತೆಯಿದೆ. ಆದರೆ ನಮ್ಮ ಮೈಸೂರಿನಲ್ಲಿ ಪ್ರತಿ 100 ಚದರ ಮೈಲಿಗೆ 36 ಮೈಲಿಗಳ ರಸ್ತೆಯಿರುತ್ತದೆ. ಹೀಗೆಲ್ಲಾ ಈ ಸಮಿತಿಯವರು ಅನೇಕ ವಿಷಯಗಳನ್ನು ಪರಿಶೀಲನೆ ಮಾಡಿದ್ದಾರೆ. ಅಂದರೆ ನಮ್ಮ ಮೈಸೂರು ದೇಶದಲ್ಲಿರುವಷ್ಟು ಸಂಚಾರ ಸೌಲಭ್ಯಗಳು ನಮ್ಮ ನೆರೆಹೊರೆಯ ಪ್ರಾಂತ್ಯಗಳಲ್ಲಿರುವುದಿಲ್ಲ ಎನ್ನುವುದು ಈ ವರದಿಯಿಂದ ನಮಗೆ ವ್ಯಕ್ತಪಡುತ್ತದೆ. ಆದರೆ ಈ ದಿವಸ ನಮ್ಮ ಮೈಸೂರಿನಲ್ಲಿರುವಷ್ಟೇ ಈ ಸಂಚಾರ ಸೌಲಭ್ಯಗಳನ್ನು ನಾವು ಇತರ ಪ್ರಾಂತ್ಯಗಳಲ್ಲಿ ನಡೆಸಬೇಕಾಗಿದ್ದರೆ ಎಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ ಎನ್ನುವುದನ್ನೂ ಕೂಡ ಈ ಸಮಿತಿಯವರೇ ತಿಳಿಸಿದ್ದಾರೆ.

1 P.M.

ರಸ್ತೆ ಸೌಕರ್ಯಗಳ ವಿಷಯದಲ್ಲಿ ಮೈಸೂರು ಸಂಸ್ಥಾನದ ಮಟ್ಟಕ್ಕೆ ಬರಬೇಕಾದರೆ ಹೈದರಾಬಾದ್ ಸಂಸ್ಥಾನದ ಕನ್ನಡ ಪ್ರದೇಶದಲ್ಲಿ 5,069 ಮೈಲಿಗಳಷ್ಟು ಉದ್ದವಾಗುವ ಹೊಸ ರಸ್ತೆಗಳನ್ನು, ಬೊಂಬಾಯಿ ರಾಜ್ಯದಲ್ಲಿರುವ ಕನ್ನಡ ಪ್ರದೇಶದಲ್ಲಿ 3,245 ಮೈಲಿಗಳಷ್ಟು ಉದ್ದದ ಹೊಸ ರಸ್ತೆಗಳನ್ನು ಏರ್ಪಡಿಸಬೇಕಾಗುವುದು. ಹೈದರಾಬಾದ್ ಸಂಸ್ಥಾನದಲ್ಲಿರುವ ಕನ್ನಡ ಪ್ರದೇಶದಲ್ಲಿ ಹೊಸ ರಸ್ತೆಗಳನ್ನು ಏರ್ಪಡಿಸುವುದಕ್ಕೆ 760 ಲಕ್ಷ ರೂಪಾಯಿ ಮೊಬಲಗೂ, ಬೊಂಬಾಯಿ ರಾಜ್ಯದಲ್ಲಿರುವ ಕನ್ನಡ ಪ್ರದೇಶದಲ್ಲಿ ಹೆಚ್ಚಿಗೆ ಹೊಸ ರಸ್ತೆಗಳನ್ನು ಏರ್ಪಡಿಸುವುದಕ್ಕೆ 486 ಲಕ್ಷ ರೂಪಾಯಿಯ ಮೊಬಲಗೂ ಮತ್ತು ಮದರಾಸು ರಾಜ್ಯದಲ್ಲಿರುವ ಕನ್ನಡ ಪ್ರದೇಶದಲ್ಲ ಹೆಚ್ಚಿಗೆ ಹೊಸ ರಸ್ತೆಗಳನ್ನು ಏರ್ಪಡಿಸುವುದಕ್ಕೆ 60 ಲಕ್ಷ ರೂಪಾಯಿ ಮೊಬಲಗೂ ಬೇಕಾಗುವುದು ಮತ್ತು ಈ ರೀತಿ ಹಣವನ್ನು ಒದಗಿಸುವುದಲ್ಲದೆ ರಸ್ತೆಗಳನ್ನು ಸಾಲು ಸಾಲು ಒಳ್ಳೆಯ ರೀತಿಯಲ್ಲಿ ದುರಸ್ತು ಮಾಡಿ ಇಟ್ಟುಕೊಳ್ಳುವುದಕ್ಕೂ ಕೂಡ ಹಣವನ್ನು ಒದಗಿಸಬೇಕಾಗಿದೆ. ಈ ಬಾಬಿನಲ್ಲಿ ಯಥೇಚ್ಛವಾಗಿ ರಸ್ತೆ ಸೌಕರ್ಯವನ್ನು ಒದಗಿಸುವುದಕ್ಕೆ ಹಣವನ್ನು ಒದಗಿಸಬೇಕಾಗುತ್ತದೆ. ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಶ್ರೀವಾರ್ಕ ಕಂಠಿಯವರು "ಸುಮಾರು 1,000 ಮೈಲಿ ಹಳ್ಳಿಗಳ ರಸ್ತೆಯನ್ನು ಬಿಟ್ಟುಬಿಟ್ಟಿದ್ದಾರೆ, ಈ ಹಳ್ಳಿಗಳ ರಸ್ತೆಗಳನ್ನು ಬಿಟ್ಟು ಬಿಡದೇ ಇದ್ದರೆ ಪ್ರತಿ 100 ಚದರ ಮೈಲಿಗೆ ಇರತಕ್ಕಂಥ ರಸ್ತೆ ಸಂಖ್ಯೆ ಇನ್ನೂ ಹೆಚ್ಚುತ್ತಾ ಇತ್ತು, ಈ ಅಂಶವನ್ನು ಬಿಟ್ಟು ಕಮಿಟಿಯವರು ವರದಿ ಮಾಡಿದ್ದಾರೆ, ಇದರಿಂದ ಅನ್ಯಾಯವಾಗಿದೆ" ಎಂದು ಅವರು ಹೇಳಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಅನ್ಯಾಯವಾಗಿದೆಯೆಂದು ಹೇಳಲಿಲ್ಲ. My question is this. When he makes a certain statement, he must substantiate it. A gentleman's statement must not be misquoted.

ಶ್ರೀ ಕೆ. ಪುಟ್ಟಸ್ವಾಮಿ—ಏನು ಬರೆದಿದ್ದಾರೆ ಎಂಬುದನ್ನು ಓದಿ ಹೇಳಬೇಕೋ? ಅದನ್ನು ಪ್ರಸ್ತಾಪನೆ ಮಾಡುತ್ತಾ "ಈ 1,000 ಮೈಲಿಗಳನ್ನು ಸೇರಿಸಿರಬೇಕಾಗಿತ್ತು. ಸೇರಿಸಿದ್ದರೆ ಇನ್ನೂ ಹೆಚ್ಚಿನ ಸಂಚಾರ ಸೌಕರ್ಯಗಳು ಇರುತ್ತಿತ್ತೆಂದು ಗೊತ್ತಾಗುತ್ತದೆ" ಎಂದು ಹೇಳಿದ್ದಾರೆ. ಆದರೆ ಒಂದು ವಿಚಾರವನ್ನು ಅವರು ಮರೆತಿದ್ದಾರೆ. ಮೈಸೂರು ದೇಶದಲ್ಲಿ ಇರತಕ್ಕಂಥ ಹಳ್ಳಿಗಳಿಗೆ ಹೋಗತಕ್ಕಂಥ Inter-Village Communications roads ಕೂಡ ಆ ಲೆಖ್ಖದಿಂದ ಬಿಟ್ಟು 36·7 ಮೈಲಿ ಇದೆ ಎಂದು ಹೇಳುತ್ತಾರೆಯೇ ವಿನಾ, ಅದನ್ನು ಸೇರಿಸಿಕೊಂಡಿದ್ದರೆ ಮೈಸೂರು ದೇಶದಲ್ಲಿ 36 ಮೈಲಿ ಬದಲು ಇನ್ನೂ ಹೆಚ್ಚು ಇರತ್ತಿತ್ತು. ಆದ್ದರಿಂದ ಶ್ರೀವಾರ್ಕ ಕಂಠಿಯವರು ಹೇಳಿರತಕ್ಕಂಥ ವಾದದಲ್ಲಿ ಯಾವ ತಿರುಳೂ ಇಲ್ಲ. ಅಲ್ಲಿ ಗ್ರಾಮಾಂತರ ರಸ್ತೆಗಳು ಸರಿಯಾದ ಸ್ಥಿತಿಯಲ್ಲಿ ಇಲ್ಲ ಎನ್ನುವುದು ಕಾಣುತ್ತದೆ. ಒಂದು ಪಕ್ಷ ಇದ್ದಿದ್ದರೂ ಕೂಡ

(ಶ್ರೀ ಕೆ. ಪುಟ್ಟಸ್ವಾಮಿ.)

ಮೈಸೂರು ದೇಶದಲ್ಲಿ ಇರತಕ್ಕಂಥ ಗ್ರಾಮಾಂತರ ರಸ್ತೆಗಳನ್ನು ಬಿಟ್ಟುಬಿಟ್ಟಿರುವುದರಿಂದ ಒಂದಕ್ಕೊಂದು ಹೋಲಿಕೆ ಮಾಡುವಾಗ ಮೈಸೂರು ದೇಶ ಮತ್ತು ಹೊರಭಾಗದ ಕನ್ನಡ ದೇಶದ ಹೋಲಿಕೆಯಲ್ಲಿ ಯಾವ ಅಂತರವನ್ನೂ ಉಂಟು ಮಾಡಲಿಲ್ಲ.

Sri U. M. MADAPPA (Chamarajanagar).—On a point of information. May I put some question ?

Sri K. PUTTASWAMY.—It depends on the nature of the interruption.

Mr. SPEAKER.—He does not tolerate interruption—only from the Hon'ble Member, Sri T. N. Mudalagiri Gowda (*Laughter*).

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನು ದೇಶದಲ್ಲಿರತಕ್ಕಂಥ ವಿದ್ಯಾಭ್ಯಾಸ, ವೈದ್ಯಸಹಾಯ ಮತ್ತು ಜನಾರೋಗ್ಯ ರಕ್ಷಣೆ ಇದು ಬಹಳ ಮುಖ್ಯವಾದುವು. ಈ ಸಭೆಯಲ್ಲಿ ಈ ವಿಚಾರವಾಗಿ ಅನೇಕಸಾರಿ ನಾವು ಸರ್ಕಾರವನ್ನು ಆಕ್ಷೇಪಣೆ ಮಾಡುತ್ತಿದ್ದೇವೆ. ಸುಮಾರು ಒಂದು ಲಕ್ಷ 40 ಸಾವಿರ ಪ್ರಜಾಸಂಖ್ಯೆ ಇರತಕ್ಕಂಥ ಚನ್ನಪಟ್ಟಣ ತಾಲ್ಲೂಕಿನಲ್ಲಿ ಒಂದೇ ಆಸ್ಪತ್ರೆ ಇದೆ. ಹಾಗೆ ಸಾಕಾದಷ್ಟು ಸೌಲಭ್ಯವನ್ನು ನಮ್ಮಲ್ಲಿ ಏರ್ಪಡಿಸಿಕೊಡುವುದಕ್ಕೆ ಆಗಿಲ್ಲ ಎನ್ನುವ ವಿಚಾರ ಈ ಸಭೆಯಲ್ಲಿ ಎಷ್ಟೋ ಸಾರಿ ಬಂದಿದೆ. ಇಷ್ಟೆಲ್ಲಾ ಇದ್ದರೂ ಕೂಡ ಮೈಸೂರು ದೇಶಕ್ಕೂ ಹೊರಗಡೆಯ ಭಾಗಕ್ಕೂ ಯಾವ ರೀತಿ ಹೋಲಿಕೆಯಾಗಿದೆ ಎಂಬುದನ್ನು ನೋಡಬೇಕು. ಒಂದು ಪಕ್ಷ ಮೈಸೂರು ದೇಶದಲ್ಲಿ ಇರತಕ್ಕಂಥ ಸೌಲಭ್ಯವನ್ನು ಹೊರಗಡೆ ಒದಗಿಸಬೇಕಾದರೆ ಎಷ್ಟು ಖರ್ಚು ಮಾಡಬೇಕಾಗುತ್ತದೆ ಎನ್ನುವುದನ್ನು ಕೂಡ ನಾವು ಲೆಖ್ಖ ಹಾಕಿಕೊಳ್ಳಬೇಕಾಗುತ್ತದೆ. ಈಗ ಹೈದರಾಬಾದ್ ದೇಶದಲ್ಲಿ ಸುಮಾರು ಒಂದು ಲಕ್ಷ ಪ್ರಜಾಸಂಖ್ಯೆಗೆ 1·1 ಆಸ್ಪತ್ರೆ ಇದೆ. ಬೊಂಬಾಯಿನಲ್ಲಿ 1·6 ಇದೆ. ಮದ್ರಾಸ್‌ನಲ್ಲಿ 2 ಇದೆ. ಕೊಡಗಿನಲ್ಲಿ 7 ಇದೆ. ಮೈಸೂರು ದೇಶದಲ್ಲಿ 5·3 ಇದೆ.

ವೈದ್ಯ ಸಹಾಯದ ವಿಚಾರದಲ್ಲಿ, ಮೈಸೂರು ಸಂಸ್ಥಾನದ ಹಂತಕ್ಕೆ ಬರಬೇಕಾದರೆ ಜನ ಸಂಖ್ಯೆಯ ಸಾಂದ್ರತೆಯಲ್ಲಿ ಕಂಡುಬರತಕ್ಕ ವ್ಯತ್ಯಾಸಗಳು, ವಾಯುಗುಣದ ಪರಿಸ್ಥಿತಿಗಳು ಮತ್ತು ಇತರ ಅಂಶಗಳನ್ನು ಗಣನೆಗೆ ತೆಗೆದುಕೊಂಡು ವಿಷಯನ್ನು ಪರಿಶೀಲಿಸಿದಲ್ಲಿ ರಾಯಚೂರು, ಬಿದರೆ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ನಾಲ್ಕರಷ್ಟೂ, ಬೊಂಬಾಯಿ ರಾಜ್ಯದ ಕನ್ನಡ ಪ್ರದೇಶಗಳಲ್ಲಿ ಮತ್ತು ದಕ್ಷಿಣ ಕರ್ಣಾಟಕದಲ್ಲಿ ಕನಿಷ್ಠ ಪಕ್ಷ ಎರಡರಷ್ಟೂ, ವೈದ್ಯ ಸಹಾಯದ ಸೌಲಭ್ಯಗಳನ್ನು ಹೆಚ್ಚಿಸಬೇಕಾದ ಅವಶ್ಯಕತೆಯು ಇರುವುದಾಗಿ ಕಂಡುಬಂದಿದೆ. ರಾಯಚೂರು, ಬಿದರೆ ಮತ್ತು ಗುಲ್ಬರ್ಗ ಈ ಪ್ರದೇಶಗಳಲ್ಲಿ ಹೊಸ ಡಿಸ್ಟ್ರಿಕ್ಟ್ ಆಸ್ಪತ್ರೆಗಳನ್ನು ಕಟ್ಟಬೇಕಾಗಿದೆ. ಈಗ ಆಸ್ಪತ್ರೆಗಳಲ್ಲಿರುವ ಚಿಕಿತ್ಸಾ ಸಲಕರಣೆಗಳು ತೃಪ್ತಿಕರವಾಗಿಲ್ಲ. ಹಾಲಿ ಇರತಕ್ಕ ಡಿಸ್ಪೆನ್ಸರಿಗಳಿಗೂ ಮತ್ತು ಹೊಸದಾಗಿ ಏರ್ಪಡಿಸಬೇಕಾಗಿರುವ ಡಿಸ್ಪೆನ್ಸರಿಗಳಿಗೂ ಸೂಕ್ತವಾದ ಕಟ್ಟಡಗಳನ್ನು ಕಟ್ಟಬೇಕಾಗಿದೆ. ಡಿಸ್ಟ್ರಿಕ್ಟ್ ಆಸ್ಪತ್ರೆಗಳನ್ನು ಕಟ್ಟಿ ಅವುಗಳನ್ನು ಸಜ್ಜುಗೊಳಿಸಲು 20 ಲಕ್ಷ ರೂಪಾಯಿಗಳೂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 120 ಹೆಚ್ಚಿಗೆ ಡಿಸ್ಪೆನ್ಸರಿಗಳನ್ನು ಏರ್ಪಡಿಸಲು ಅವುಗಳಿಗೆ ಕಟ್ಟಡಗಳನ್ನು ಕಟ್ಟಲು 24 ಲಕ್ಷ ರೂಪಾಯಿಗಳೂ ಬೇಕಾಗುವುದೆಂದು ಅಂದಾಜು ಮಾಡಲಾಗಿದೆ.

ಈ ಆಸ್ಪತ್ರೆಗಳನ್ನು ನಡೆಯಿಸಿಕೊಂಡುಬರುವುದರಿಂದ ವೈದ್ಯ ಸಹಾಯಕ್ಕಾಗಿ ಈ ಮೂರು ಡಿಸ್ಟ್ರಿಕ್ಟುಗಳಾಗಿ ಒದಗಿಸುವ ವಾರ್ಷಿಕ ವೆಚ್ಚವನ್ನು 20 ಲಕ್ಷ ರೂಪಾಯಿಗಳಷ್ಟು ಹೆಚ್ಚಿಸಬೇಕಾಗುವುದು. ಸಾರ್ವಜನಿಕರ ಆರೋಗ್ಯಕ್ಕೆ ಸಂಬಂಧಪಟ್ಟ ಸೌಲಭ್ಯಗಳನ್ನು ಉತ್ತಮಗೊಳಿಸಲು, ಈ ಸಂಬಂಧದಲ್ಲಿ ಹಾಲಿ ವೆಚ್ಚವಾಗುತ್ತಿರುವ ಮೊಬಲಗನ್ನು ಐದು ಲಕ್ಷ ರೂಪಾಯಿಗಳಷ್ಟು ಹೆಚ್ಚಿಸಬೇಕಾಗಿದೆಯೆಂದು ನಾವು ಭಾವಿಸುತ್ತೇವೆ.

ಮುಂಬಯಿ ರಾಜ್ಯದ ಕನ್ನಡ ಪ್ರದೇಶಗಳಲ್ಲಿ ಪರಿಸ್ಥಿತಿಯು ಎಷ್ಟೋ ಉತ್ತಮವಾಗಿದೆ. ಆದರೂ ವೈದ್ಯ ಸಹಾಯದ ವಿಚಾರದಲ್ಲಿ ಮೈಸೂರು ರಾಜ್ಯದ ಮಟ್ಟವನ್ನು ಮುಟ್ಟಲು ಈಗ ಹಾಲಿ ಇರತಕ್ಕ ಸಂಸ್ಥೆಗಳ ಸಂಖ್ಯೆಯನ್ನು ಎರಡರಷ್ಟಕ್ಕೆ ಹೆಚ್ಚಿಸಬೇಕಾಗಿದೆ. ಅಂದರೆ, 80 ಹೊಸ ಡಿಸ್ಪೆನ್ಸರಿಗಳನ್ನು ಏರ್ಪಡಿಸಬೇಕಾಗಿದೆ. ಇದರಿಂದ ಈ ಹೊಸ ಡಿಸ್ಪೆನ್ಸರಿಗಳಿಗೆ ಕಟ್ಟಡಗಳನ್ನು ಕಟ್ಟುವುದಕ್ಕಾಗಿಯೂ ಮತ್ತು ಅವುಗಳಲ್ಲಿ ವೈದ್ಯಕೀಯ ಉಪಕರಣಗಳನ್ನು ಸಜ್ಜುಗೊಳಿಸುವುದಕ್ಕಾಗಿಯೂ 16 ಲಕ್ಷ ರೂಪಾಯಿಗಳಷ್ಟು ಹೆಚ್ಚಿಗೆ ವೆಚ್ಚವೂ ಮತ್ತು ಸದರಿ ಡಿಸ್ಪೆನ್ಸರಿಗಳನ್ನು ನಡೆಯಿಸಿಕೊಂಡು ಬರುವುದಕ್ಕಾಗಿ, ಸುಮಾರು 16 ಲಕ್ಷ ರೂಪಾಯಿಗಳಷ್ಟು ಹೆಚ್ಚಿಗೆ ವಾರ್ಷಿಕ ಆವೃತ್ತ ವೆಚ್ಚವೂ ತಗಲುವುದಾಗಿದೆ. ಹೀಗೆ ಮೈಸೂರು ದೇಶದ ಹೊರಗಡೆ ಇರತಕ್ಕ ಕನ್ನಡ ಭಾಗಗಳಲ್ಲಿ ವೈದ್ಯಕೀಯ ಸೌಲಭ್ಯ ಸಾಕಷ್ಟು ಇಲ್ಲ. ನಮ್ಮಲ್ಲಿಯೂ ಸಾಕಷ್ಟು ಇಲ್ಲ. ಇಲ್ಲಿ ನೋಡಿದರೆ ಪರಿಸ್ಥಿತಿ ಒಂದು ವಿಧದಲ್ಲಿ ಶೋಚನೀಯವಾಗಿದೆ ಎಂದು ಹೇಳಬಹುದು. ಮೈಸೂರು ದೇಶ ದೊಡ್ಡದಾಗಿ ಹೊರಗಡೆ ಇರತಕ್ಕಂಥ ಭಾಗಗಳು ಮೈಸೂರು ದೇಶಕ್ಕೆ ಸೇರದೆ ಇದ್ದರೆ ಬಹುಕಾಲದವರೆಗೆ ಈಗ ಇರತಕ್ಕಂಥ ಮೈಸೂರು ದೇಶದಲ್ಲಿ ಇಲ್ಲಿಯೂ ಕೂಡ ಒಂದು ಹೊಸ ಆಸ್ಪತ್ರೆಯನ್ನು ಕಟ್ಟಿಸುವುದಾಗಲಿ ಅಥವಾ ಇರತಕ್ಕಂಥ ಆಸ್ಪತ್ರೆಗಳಿಗೆ ಉಪಕರಣಗಳನ್ನು ಒದಗಿಸುವುದಾಗಲಿ ಡಾಕ್ಟರುಗಳು ಇಲ್ಲದೇ ಇರತಕ್ಕಂಥ ಅನೇಕ ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ಒದಗಿಸುವುದಾಗಲಿ ಕನಸಿನ ಮಾತಾಗಿದೆ. ಆದ್ದರಿಂದ ವೈದ್ಯಕೀಯ ದೃಷ್ಟಿಯಿಂದ ನೋಡಿದರೆ ಮೈಸೂರು ದೇಶದಲ್ಲಿರತಕ್ಕಂಥ ಜನಸ್ತೋಮಕ್ಕೆ ಸರಿಯಾದಂಥ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಕೊಡಬೇಕಾಗಿದ್ದರೆ ಅದರ ಭಾರವನ್ನು ಹೊತ್ತಿರತಕ್ಕಂಥ ಇಂತಹ ಸಭೆ ಮೈಸೂರು ದೇಶ ವಿಸ್ತೃತವಾಗಬೇಕು ಎಂದು ತೀರ್ಮಾನಕ್ಕೆ ಬರಬೇಕಾದರೆ ಬಹಳ ದೀರ್ಘವಾಗಿ ಯೋಚನೆ ಮಾಡಬೇಕು. ಆದ್ದರಿಂದ ಮೈಸೂರು ದೇಶದ ಜನರಿಗೆ ವೈದ್ಯಕೀಯ ಕ್ಷೇಮ ಸೌಲಭ್ಯ ಬಹಳ ವರ್ಷದವರೆಗೂ ದೊರೆಯುವುದಿಲ್ಲ ಎನ್ನುವುದು ಇದರಿಂದ ಕಾಣುತ್ತದೆ. ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಶ್ರೀಮಾನ್ ಎಸ್. ಆರ್. ಕಂಠಿಯವರು "ಮುಂಬಯಿಯಲ್ಲಿರತಕ್ಕಂಥ ಕನ್ನಡ ಜಿಲ್ಲೆಗಳಲ್ಲಿ subsidised dispensary ಇವೆ, ಆ subsidised dispensaryಗಳನ್ನು ಲೆಖ್ಖಕ್ಕೆ ತೆಗೆದುಕೊಂಡಿಲ್ಲ" ವೆಂದು ಹೇಳಿದರು. Subsidised dispensary ಅಂದರೆ ನಮ್ಮ ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಆಯುರ್ವೇದ ಔಷಧಿ ಉತ್ತೇಜನ ಕೊಡುವುದಕ್ಕಾಗಿ ಡಾಕ್ಟರುಗಳಿಗೆ grant ಕೊಡುತ್ತಾರೆ. ಹಾಗೆಯೇ ಮುಂಬಯಿಯಲ್ಲಿ Allopathic doctorsಗೂ ಕೊಡುತ್ತಾರೆ. ಬೇರೆ ಗ್ರಾಮಾಂತರಗಳಲ್ಲಿ ಅಂತಹವರಿಗೆ dispensary

ಗಳನ್ನು ನಡೆಸುವುದಕ್ಕೋಸ್ಕರ ಸ್ವಲ್ಪ ಗ್ರ್ಯಾಂಟನ್ನು ಕೊಡುತ್ತಾರೆ. ಅಲ್ಲಿ Grant-in-aid dispensaries ಗಳೂ ಇರುತ್ತವೆ.

Sri J. MOHAMED IMAM.—For the information of the House, these subsidised dispensaries are much better than our regular hospitals.

ಶ್ರೀ ಕೆ. ಪುಟ್ಟಸ್ವಾಮಿ.—ಯಾರು ಯಾರಿಗೆ ಯಾವ ವೈದ್ಯ ಬೇಕೋ ಅದನ್ನು ಹೇಳುವುದು ಕಷ್ಟ. ಕೆಲವರಿಗೆ ಯಾವ ವೈದ್ಯವೂ ಹಿಡಿಯುವುದಿಲ್ಲ. ಇರುವ ವಿಚಾರ ಚರ್ಚೆ ಮಾಡಿದ್ದಾರೆ. ಅವು ಇಲ್ಲದಿದ್ದರೆ grant ಕೊಡುತ್ತಿರಲಿಲ್ಲ; grant ಕೊಡದಿದ್ದರೆ ದೇಶದಲ್ಲಿ ಗ್ರ್ಯಾಂಟ ಕೊಡತಕ್ಕ subsidyಯಿಂದ ಒಬ್ಬ ಡಾಕ್ಟರ್ ಒಂದು ಹಳ್ಳಿಯಲ್ಲಿ ದಿನವೂ ಜೀವನಮಾಡಿಕೊಳ್ಳುವಹಾಗಿದ್ದರೆ ಅದನ್ನು ಸರ್ಕಾರಿ ಆಸ್ಪತ್ರೆಯೆಂದು ಕರೆಯುತ್ತಿದ್ದರು. ಅದು ಸರ್ಕಾರದ ಅಸ್ಪತ್ರೆಯಲ್ಲ; ಉಚಿತವಾದ ಚಿಕಿತ್ಸೆಯೂ ಇಲ್ಲ. ಬಡವರಾದರೂ ಕೂಡ ಏನಾದರೂ ಪಾತ್ರೆಯನ್ನು ಗಿರಿವಿ ಇಟ್ಟು ಔಷಧೋಪಚಾರಗಳನ್ನು ಪಡೆದು ಗುಣಮುಖವಾಗಬೇಕೇ ವಿನಾ subsidised ಆಸ್ಪತ್ರೆ ಸರ್ಕಾರ ಸ್ಥಾಪಿಸಲ್ಪಟ್ಟ ಸಾರ್ವಜನಿಕರ ಉಪಯೋಗಕ್ಕಾಗಿ ಅವಕಾಶವಾಗುವಂಥ ಆಸ್ಪತ್ರೆಯಾಗುವುದಿಲ್ಲ. ಆದ್ದರಿಂದ subsidised ಆಸ್ಪತ್ರೆಗಳನ್ನು ತೆಗೆಯದಿದ್ದರೆ, ಅದು ಒಂದು ಲಕ್ಷ ಪ್ರಜಾಸಂಖ್ಯೆಗೆ 4·6 ಆಗುತ್ತದೆ. 1·6 ಬದಲು 4·6 ಆಗುತ್ತದೆ. ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ ಎಂದು ಹೇಳುತ್ತೇನೆ.

ಅದನ್ನು ಗಮನಕ್ಕೆ ತೆಗೆದುಕೊಳ್ಳುವುದು ಸಾಧ್ಯವಿಲ್ಲದ ಮಾತು. ಯಾವ ದೃಷ್ಟಿಯಿಂದಲೂ ಕೂಡ ಆ ಆಸ್ಪತ್ರೆಗಳನ್ನು ಸಾರ್ವಜನಿಕರ ಉಪಯೋಗಕ್ಕಿರತಕ್ಕ ಆಸ್ಪತ್ರೆಗಳೆಂದು ಪರಿಗಣಿಸುವುದಕ್ಕಾಗುವುದಿಲ್ಲ. ಒಂದು ವೇಳೆ ವಾದಕ್ಕಾಗಿ ಅವುಗಳನ್ನು ಆಸ್ಪತ್ರೆಗಳೆಂದು ಒಪ್ಪುವುದಾದರೆ ಅಂಥ ಗ್ರ್ಯಾಂಟ್ ಇನ್ ಏಡ್ ಆಸ್ಪತ್ರೆಗಳು ಬೇಕಾದಷ್ಟಿವೆ.

ಶ್ರೀ ಎ. ಭೀಮಪ್ಪನಾಯಕ್.—ಬೇಕಾದಷ್ಟಿವೆ!

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀ ಭೀಮಪ್ಪನಾಯಕರು ವ್ಯಂಗ್ಯವಾಗಿ ಬೇಕಾದಷ್ಟಿವೆಯೆಂದು ಹೇಳಿದ ಮಾತ್ರಕ್ಕೇ ಇರುವುದೇನೂ ವ್ಯತ್ಯಾಸವಾಗುವುದಿಲ್ಲ. ಮೈಸೂರು ದೇಶದಲ್ಲಿ, ಒಂದು ದೃಷ್ಟಿಯಿಂದ ನೋಡುವುದಾದರೆ, ಬಹಳ ಹೆಸರಾದಂಥ ಡಾಕ್ಟರುಗಳು ಪ್ರಖ್ಯಾತರಾದ ಆಯುರ್ವೇದ ಯುನಾನಿ ಪಂಡಿತರುಗಳಿದ್ದಾರೆ. ಒಂದೊಂದು ಆಸ್ಪತ್ರೆಗಳನ್ನೇ ಸ್ಥಾಪನೆ ಮಾಡುವುದಕ್ಕೆ ಸಹಾಯ ಮಾಡಿದಂಥ ಡಾಕ್ಟರುಗಳೂ ಇದ್ದಾರೆ. ಆದ್ದರಿಂದ ಈ ಆಸ್ಪತ್ರೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿಲ್ಲ. ಸರ್ಕಾರದ ಮೂಲಕ ಸ್ಥಾಪನೆಯಾದ ಆಸ್ಪತ್ರೆಗಳನ್ನು ಪರಿಶೀಲನೆ ಮಾಡಬೇಕೇ ಹೊರತು ಇಂಥ ಆಸ್ಪತ್ರೆಗಳನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈ ರೀತಿ ಪರಿಶೀಲನೆ ಮಾಡುವುದಾದರೆ ಮೈಸೂರು ದೇಶದಲ್ಲಿ ಒಂದು ಲಕ್ಷ ಪ್ರಜಾಸಂಖ್ಯೆಗೆ 5.5 ಆಸ್ಪತ್ರೆಗಳಿದ್ದರೆ ಮದ್ರಾಸ್, ಬೊಂಬಾಯಿ ಮತ್ತು ಹೈದರಾಬಾದ್ ಕರ್ಣಾಟಕದಲ್ಲಿ ಸೇಕಡ 1½ ಯಷ್ಟು ಕೂಡ ಇಲ್ಲ. ಆ ಪ್ರದೇಶಕ್ಕೆ ಬೇಕಾದಂಥ ಆಸ್ಪತ್ರೆಗಳನ್ನು ಒದಗಿಸಬೇಕಾದರೆ ಎಷ್ಟು ಖರ್ಚಾಗುತ್ತದೆಂಬುದನ್ನು ಸಮಿತಿಯವರು ತಮ್ಮ ವರದಿಯಲ್ಲಿ ಸೂಚಿಸಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ತೆರಿಗೆ ಹಾಕಿದರಾಯಿತು.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀ ರಾಮಯ್ಯನವರು ಪಕ್ಕದಲ್ಲೇ ಕುಳಿತುಕೊಂಡು ತೆರಿಗೆ ಹಾಕಿದರಾಯಿತು ಎಂದು ಹೇಳುತ್ತಾರೆ. ಈಗಲೂ ಅಲ್ಲಿ ತೆರಿಗೆ ಇದೆ. ಅಲ್ಲಿ ತೆರಿಗೆ ಇಲ್ಲದೆ ಇಲ್ಲ. ಇನ್ನು ಮತ್ತೆ ತೆರಿಗೆ ಹಾಕುವುದು ಹೇಗಿರುತ್ತದೆಂದರೆ, ನಮ್ಮ ಕಡೆಯಲ್ಲಿ 'ವರಿ' ವಸೂಲು ಮಾಡುವುದು ಎಂದು ಹೇಳಿ ಬಡವರಾಗಲಿ, ಬಲ್ಲಿದರಾಗಲಿ, ಶ್ರೀಮಂತರಾಗಲಿ ಗರೀಬರಾಗಲಿ ಒಬ್ಬೊಬ್ಬರೂ ಐದು ರೂಪಾಯಿಗಳನ್ನು ಕೊಡಬೇಕೆಂದರೆ, ಒಬ್ಬರನ್ನೂ ಬಿಡದೆ ವಸೂಲು ಮಾಡಿ ಬಿಡುತ್ತಾರೆ. ಭೀಮಪ್ಪನಾಯಕರಂಥ ದೊಡ್ಡ ದೊಡ್ಡ ಒಕ್ಕಲಿಗರೂ ಐದು ರೂಪಾಯಿ ಕೊಡಬೇಕು ಬಡವರೂ ಐದು ರೂಪಾಯಿ ಕೊಡಬೇಕು. ಅದರಂತೆ ನಾಳೆ ಈ ಪ್ರದೇಶಗಳು ಮೈಸೂರಿಗೆ ಸೇರಿ ಅಲ್ಲಿಗೆ ಆಸ್ಪತ್ರೆಗಳನ್ನು ಕೊಡಬೇಕಾದಾಗ ಹೊಸದಾಗಿ ಕಂದಾಯ ಹಾಕಬೇಕಾಗುತ್ತದೆ.. ಈಗಾಗಲೇ ದೇಶದಲ್ಲಿ ಯಾವ ಯಾವ ಕಂದಾಯವಿದೆ ಯಾವ ಯಾವ ಕಂದಾಯ ಹಾಕಬಹುದು ಎಂಬುದನ್ನು ನೋಡುವುದಾದರೆ, ನಮ್ಮ ಮೈಸೂರಿಗೆ ಸಂಬಧಪಟ್ಟಂತಿರುವ ಸ್ಟೇಟ್ ಲಿಸ್ಟಿನಲ್ಲಿರುವ 17 ಕಂದಾಯಗಳಲ್ಲಿ 16 ಕಂದಾಯಗಳನ್ನು ಈಗಾಗಲೇ ಹಾಕಿದೆ. ಒಂದು ಕಂದಾಯ ಮಾತ್ರ ಬಾಕಿ ಇದೆ. ಅದು ತಲೆಗಂದಾಯ! ಈ ತಲೆಗಂದಾಯ ಹಾಕುವ ಹೊತ್ತಿಗೆ ಶ್ರೀ ಹುಚ್ಚೇಗೌಡರೂ, ನಾವು ಎಲ್ಲಿರುತ್ತೇವೋ ಗೊತ್ತಿಲ್ಲ. ಈ ತಲೆಗಂದಾಯವನ್ನು ವಿಧಿಸಿದಲ್ಲಿ, 1955 ನೆಯ ಇಸವಿಯಲ್ಲಿದ್ದ ಮೈಸೂರಿನ ಪ್ರದೇಶಕ್ಕೆ ಅನ್ವಯವಾಗತಕ್ಕದ್ದಲ್ಲ ಎಂದು ಹೇಳುವುದಕ್ಕೆ ರಾಜ್ಯಾಂಗ ಅಡ್ಡಿ ಬರುತ್ತದೆ. ತಲೆಗೆಲ್ಲಾ ಒಂದೇ ನಾಮ ಹಾಕಬೇಕಾಗುತ್ತದೆ. ಮೈಸೂರು ದೇಶದ ಜನರ ತಲೆ ಬೋಳಿಸಿ ಹೋಗುತ್ತದೆ. ಅದರಲ್ಲೇನೂ ಅನುಮಾನವಿಲ್ಲ.

ಒಬ್ಬ ಸದಸ್ಯರು.—ಬೋಳಿಸಿದರೆ clean ಆಗಿರುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—'ಕ್ಲೀನ್' ಎಂದರೆ ಕನ್ನಡದಲ್ಲಿ ಚೊಕ್ಕಟ ಎಂದು. ಮೈಸೂರಿನವರು ಚೊಕ್ಕಟವಾಗುತ್ತಾರೆ!

ಮೈಸೂರು ದೇಶದಲ್ಲಿ ವಿದ್ಯಾಭ್ಯಾಸ ನೋಡೋಣ. ಇದಕ್ಕೂ ಅಂಕಿ ಅಂಶಗಳನ್ನು ಶೇಖರಿಸಿ ನಮ್ಮ ಮುಂದಿಟ್ಟಿದ್ದಾರೆ.

ಒಬ್ಬ ಸದಸ್ಯರು.—ಅದು ಎಲ್ಲರಿಗೂ ಗೊತ್ತೇ ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—ಆ ಅಂಕಿ ಅಂಶಗಳನ್ನು ಕೊಟ್ಟಿರುವುದು, ನಾವಿಲ್ಲಿ ಪ್ರತಿಯೊಬ್ಬರೂ ನಮ್ಮ ನಮ್ಮ ಯೋಗ್ಯತೆಗನುಸಾರವಾಗಿ ಒಂದು ತೀರ್ಮಾನಕ್ಕೆ ಬರಬಹುದೆಂದು ಇದನ್ನು ಕೊಟ್ಟಿದ್ದಾರೆ. ನಮಗೆ ತೋರಿದ ಬೆಳಕಿನ ಮೇಲೆ ನಮ್ಮ ಅಭಿಪ್ರಾಯವನ್ನು ಹೇಳಬಹುದು. ಹಾಗಿಲ್ಲದಿದ್ದರೆ ಇಷ್ಟೊಂದು ಜನ ಸದಸ್ಯರು ಈ ಒಂದೇ ವಿಚಾರದ ಮೇಲೆ ಭಾಷಣ ಮಾಡಬೇಕಾದ ಅಗತ್ಯವೇ ಇರಲಿಲ್ಲ. ನಮ್ಮ ನಮ್ಮ ಸಂಸ್ಕೃತಿ, ನಮ್ಮ ನಮ್ಮ ತಿಳಿವಳಿಕೆ ನಮ್ಮ ನಮ್ಮ ಕಾಲಕ್ಕನುಗುಣವಾದ ಅಭಿಪ್ರಾಯವನ್ನು ನಾವು ರೂಪಿಸುತ್ತೇವೆ. ಶ್ರೀ ಭೀಮಪ್ಪನಾಯಕರು ಒಂದು ರೀತಿ ಅಭಿಪ್ರಾಯ ಕೊಡಬಹುದು. ನಾನೇ ಒಂದು ಅಭಿಪ್ರಾಯ ಕೊಡಬಹುದು. ಭೀಮಪ್ಪನಾಯಕರಿಗೆ ನಾನು ಹೇಳುವ ವಾದ ಆಪ್ಯಾಯಮಾನವಾಗಿಲ್ಲದಿರಬಹುದು; ನನ್ನ ವಾದ ನನ್ನ ಮಗನಿಗೂ ಆಪ್ಯಾಯಮಾನವಾಗಿಲ್ಲದಿರಬಹುದು. ಅಂದ ಮಾತ್ರಕ್ಕೆ ನನ್ನ ಅಭಿಪ್ರಾಯ ಹೇಳಲಿಕ್ಕೆ ನನಗೆ ಹಕ್ಕಿಲ್ಲವೆಂದಲ್ಲ.

(ಶ್ರೀ ಕೆ. ಪುಟ್ಟಸ್ವಾಮಿ.)

ಈ ರಿಪೋರ್ಟಿನಲ್ಲಿ ಕೊಟ್ಟಿರುವ ಪ್ರಕಾರ ಅಕ್ಷರಸ್ಥರ ಸಂಖ್ಯೆ ನೋಡೋಣ. ಶೇಕಡಾವಾರು ಅಂಕಿಗಳನ್ನು ಎಲ್ಲರಿಗೂ ಅರ್ಥವಾಗುವ ಹಾಗೆ ಕೊಟ್ಟಿದ್ದಾರೆ. ಜೊತೆಗೆ ಒಳ್ಳೆಯ ಚಿತ್ರಗಳನ್ನು ಬರೆದು ಹೆಚ್ಚಿಗೆ ಶ್ರಮವಿಲ್ಲದೆ ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿದ್ದಾರೆ. ಹೀಗೆ ಅಂಕಿ ಅಂಶಗಳನ್ನು ಸಂಗ್ರಹಿಸಲು ನೇಮಿಸಿದ್ದ ಒಂದು ಪರಿಣತರ ಸಮಿತಿಯು, ಅನುಭವಶಾಲಿಗಳನ್ನು ಒಳಗೊಂಡಂಥ ಸಮಿತಿಯು, ನೆರೆಯ ಸರ್ಕಾರಗಳಿಂದ ಅಂಕಿ ಅಂಶಗಳನ್ನು ಶೇಖರಿಸಿ ತಂದು ಕೊಟ್ಟರೆ ಆ ಅಂಕಿ ಅಂಶಗಳು ನಿಜವಲ್ಲ, ಸಮಿತಿಯ ವರದಿಯು ತಪ್ಪು ಆಧಾರಗಳ ಮೇಲೆ ರಚಿತವಾಗಿದೆಯೆಂದು ಹೇಳಿದರೆ, ಅವರ ವಾದವನ್ನು ಒಪ್ಪುವುದಕ್ಕಾಗುತ್ತದೆಯೇ? ಈ ವರದಿಯನ್ನು ಹಾಗಾದರೆ guess work ಎಂದು ಹೇಳುವುದಕ್ಕಾಗುತ್ತದೆಯೇ? Guess work ಎನ್ನುವುದು ಕಾದಂಬರಿಕಾರನು ಊಹೆಯನ್ನು ಕೆಲಸ ಮಾಡುವುದಕ್ಕೆ ಬಿಟ್ಟು ತಾನು ಕಾಣಬಹುದಾದ್ದನ್ನು ಬರೆಯುವುದು. ಇದು ಅಂಥದಲ್ಲ. ಕಾಗದ ಪತ್ರಗಳಿಂದ ಹೊರಬೀಳತಕ್ಕ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈ ಅಂಕಿ ಅಂಶಗಳನ್ನು ಒಪ್ಪದೆ ಇದ್ದಮೇಲೆ ಈ ಸಭೆಯಲ್ಲಿ ಬರತಕ್ಕ ಯಾವ ಅಂಕಿ ಅಂಶಗಳನ್ನೂ ಒಪ್ಪುವುದಕ್ಕಾಗುವುದಿಲ್ಲ. ಈ ಸಭೆಯಲ್ಲಿ ಅನೇಕ ವಿಷಯಗಳ ಸಂಬಂಧದಲ್ಲಿ ಅಂಕಿ ಅಂಶಗಳನ್ನು ಮಂತ್ರಿಗಳು ಒದಗಿಸುತ್ತಾರೆ. ಅವುಗಳನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಬಿಟ್ಟರೆ, ಫೈನಲ್ ಆಯಿತು. ಇದನ್ನು ನೋಡಿದರೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ನಮ್ಮ ಸ್ನೇಹಿತರೊಬ್ಬರಿದ್ದರು. ಅವರು ಸ್ವಲ್ಪ ಮುಂಗೋಪಿ. ಅವರು ಯಾವಾಗಲೂ ವಾದ ಮಾಡುವುದು ಸ್ವಲ್ಪ ಹೆಚ್ಚು. ವಾದ ಮಾಡುವುದರಲ್ಲಿ ಸ್ವಲ್ಪ ಸೋಲಾಗುತ್ತದೆ ಎಂದು ಕಂಡು ಬಂದರೆ ಇದ್ದಕ್ಕಿದ್ದ ಹಾಗೆ ರೇಗಿಬಿದ್ದು ಕಿಡಿಕಿಡಿಯಾಗುತ್ತಿದ್ದರು. ಕೊನೆಗೆ ಅವರ ವಾದ ಸರಣಿ ಎಲ್ಲಿಗೆ ಹೋಗುತ್ತಿತ್ತೆಂದರೆ ಅವರ ಮುಂದೆ ಮೇಜಿದ್ದರೆ, "ನಾನು ಇಲ್ಲವೆಂದು ಹೇಳುತ್ತೇನೆ, ನೀನು ಹೇಗೆ ಇದೆಯೆಂದು ಸಾಧಿಸುತ್ತೀಯೆ? ನಿನಗೆ sense ಇಲ್ಲವೆಂದು ಹೇಳುತ್ತೇನೆ, ಹೇಗೆ ಇದೆಯೆಂದು ರುಜುವಾತು ಮಾಡುತ್ತೀಯೆ" ಎಂದೆಲ್ಲಾ ಹೇಳುವಷ್ಟು ಮಟ್ಟಿಗೆ ಹೋಗುತ್ತಿತ್ತು. ಇಲ್ಲಿಯೂ ಕೆಲವರು ಹೀಗೆ ವಾದ ಮಾಡುತ್ತಿರುತ್ತಾರೆ; ಕೊನೆಗೆ ವಾದಕ್ಕೆ ಯಾವುದೂ ಸಿಕ್ಕದೆ ಇದ್ದಾಗ, ಅಥವಾ ವಾದದಲ್ಲಿ ಸೋಲಾಗುವ ಸಂದರ್ಭ ಬಂದಾಗ ಅಥವಾ ತಾವು ಯಾವುದು ಸರಿಯೆಂದು ನಂಬಿ ಭವ್ಯ ಭವನವನ್ನು ಕಟ್ಟುತ್ತಿರುತ್ತಾರೋ ಅದರ ಬುಡ ಭದ್ರವಲ್ಲವೆಂದು ಗೊತ್ತಾದಾಗ ಆ ಸನ್ನಿವೇಶದಿಂದ ತಪ್ಪಿಸಿಕೊಳ್ಳುವುದಕ್ಕೆ ಇದಕ್ಕಿಂತ ಸುಲಭವಾದ ಮಾರ್ಗ ಬೇರೆ ಇಲ್ಲ. ಅದೇ ರೀತಿ ಈ ಅಂಕಿ ಅಂಶಗಳ ವರದಿಯನ್ನು ಚರ್ಚೆ ಮಾಡುವುದೇ ಸರಿಯಲ್ಲ, ಆ ಸಮಿತಿಯಲ್ಲಿದ್ದ ಸದಸ್ಯರು ಸರಿಯಾಗಿ ಪರಿಶೀಲನೆ ಮಾಡಿಲ್ಲ, ಅವರು ಪರಿಶೀಲನೆ ಮಾಡಿರುವ ಪುಸ್ತಕಗಳನ್ನು ನಮ್ಮ ಎದುರಿಗೆ ತಂದು ತೋರಿಸಿದ ಹೊರತು ನಾವು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳುವ ವಾದವನ್ನು ನಾನಂತೂ ಒಪ್ಪುವುದಕ್ಕಾಗುವುದಿಲ್ಲ. ಇಂಥ ವಾದವನ್ನು ಹೂಡಿ ಬಿಟ್ಟರೆ ಏನು ಮಾಡೋಣ? ಹೈದರಾಬಾದಿನಲ್ಲಿ ಶೇಕಡ 8.49 ಅಕ್ಷರಸ್ಥರಿದ್ದಾರೆಂದರೆ, ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಶೇಕಡ 28 ಇದ್ದಾರೆ ಎಂದು ಹೇಳಿದರೆ ಏನು ಮಾಡುವುದಕ್ಕಾಗುತ್ತದೆ. ಬೊಂಬಾಯಿನಲ್ಲಿ ಶೇಕಡ 22.3 ಮದರಾಸಿನಲ್ಲಿ ಶೇಕಡ 23 ಕೊಡಗಿನಲ್ಲಿ ಶೇಕಡ 27.2 ಮೈಸೂರಿನಲ್ಲಿ ಶೇಕಡ 20.6 ಅಕ್ಷರಸ್ಥರಿದ್ದಾರೆಂದು ಹೇಳಿದ್ದಾರೆ. ಇದನ್ನೆಲ್ಲಾ ಹೇಳಿದರೂ ನಾನು ಯಾವುದನ್ನೂ ಸಾಧಿಸಲಿಲ್ಲವೆಂದು ಅವರು ಭಾವನೆ ಮಾಡುವುದಾದರೆ, ಅವರು ಅವರ ಅಭಿಪ್ರಾಯವನ್ನೇ ಇಟ್ಟುಕೊಳ್ಳುವುದರಲ್ಲಿ ನನ್ನ ಯಾವ ಅಡ್ಡಿ ಆಕ್ಷೇಪಣೆಯೂ ಇಲ್ಲ.

ಇನ್ನು ಸ್ವಲ್ಪ ಅಂಕಿ ಅಂಶಗಳನ್ನು ನೋಡೋಣ. ಹೈದರಾಬಾದಿನಲ್ಲಿ ಶೇಕಡ 8.49 ಅಕ್ಷರಸ್ಥರಿದ್ದಾರೆ. ಇವರನ್ನು ಮೈಸೂರಿನವರ ಮಟ್ಟಕ್ಕೆ ತರಬೇಕಾದರೆ ನಾವು ಎಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ, ಎಷ್ಟೊಂದು ಸ್ಕೂಲುಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ, ಅಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕಾಗಿ ಸುಮಾರು 150 ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಒದಗಿಸಬೇಕಾಗುತ್ತದೆಂಬುದನ್ನು ನೋಡಿ. ಕಾಲೇಜುಗಳನ್ನು ಹೆಚ್ಚಿಗೆ ಏರ್ಪಡಿಸುವುದರಿಂದ 10 ಲಕ್ಷ ರೂಪಾಯಿಗಳಷ್ಟು ಹೆಚ್ಚು ಮೊಬಲಗನ್ನು ಖರ್ಚು ಮಾಡಬೇಕಾಗುತ್ತದೆಂದು ಅವರು ಹೇಳಿದ್ದಾರೆ. ಅಲ್ಲದೆ, ರಾಜ್ಯಾಂಗ ಶಾಸನದಲ್ಲಿ ಎಲ್ಲ ಮಕ್ಕಳಿಗೂ ಕಡ್ಡಾಯವಾದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಹೇಳಿದೆ.

1-30 P.M.

ಈಗ ನಾವು ನಮ್ಮ ಮೈಸೂರು ದೇಶದಲ್ಲಿ ಈ ಕಂಪಲ್ಸರಿ ಅಟೆಂಡೆನ್ಸನ್ನು ಜಾರಿಗೆ ತಂದುದರ ಪರಿಣಾಮವಾಗಿ ನಮ್ಮ ಜನಗಳಿಗೆ ನಾವು ಈ ಮಟ್ಟದವರೆಗೂ ವಿದ್ಯಾಭ್ಯಾಸವನ್ನು ಕೊಡಲು ಸಾಧ್ಯವಾಗಿದೆ. ನಾವು ನಮ್ಮ ಸರ್ಕಾರಕ್ಕೆ ಇನ್ನೂ ಸ್ವಲ್ಪಮಟ್ಟಿಗೆ ಈ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸಬೇಕೆಂದು ಕೇಳಿದ್ದಕ್ಕೆ—ಇದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ವಿದ್ಯಾಭ್ಯಾಸ ನಡೆಸಬೇಕಾದರೆ ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗುತ್ತದೆಂದು ಹೇಳಿ ಅದನ್ನು ನಮ್ಮ ಸರ್ಕಾರದವರು ಕೈಬಿಟ್ಟು ಬಿಟ್ಟರು. ಆದರೆ ಈ ದಿವಸ ದೇಶದಲ್ಲಿರತಕ್ಕ ಎಲ್ಲ ಮಕ್ಕಳಿಗೂ ಒತ್ತಾಯ ಶಿಕ್ಷಣವನ್ನು ಕೊಡಬೇಕಾದುದು ಅತ್ಯಗತ್ಯವಾಗಿದೆ. ಆದಾಗ್ಯೂ ಇದನ್ನು ನಿರ್ಧಾರಮಾಡಲು ನಮಗಿನ್ನೂ ಸಾಧ್ಯವಾಗಿಲ್ಲ. ಈಗ ನಮ್ಮ ಸರ್ಕಾರದವರಿಗೆ ವರ್ಷಕ್ಕೆ ಸುಮಾರು 40-45 ಹೊಸ ಪ್ರೈಮರಿ ಸ್ಕೂಲುಗಳನ್ನು ಸಹ ಮಂಜೂರು ಮಾಡುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಈಗಾಗಲೇ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿರುತ್ತದೆ ಅವರನ್ನೆಲ್ಲಾ ನಾವು ಸ್ವಾಗತಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಈ ಹಿಂದೆ ನಾನು ಈ ವಿಚಾರದಲ್ಲಿ ಮಾತನಾಡುತ್ತಿದ್ದಾಗ ಅವರಿಗೆ ನನ್ನ ಸ್ವಾಗತವಿರಲಿಲ್ಲ. ಅವರಾಗಿ ಅವರೇ ಬಂದಿದ್ದಾರೆ. ಈಗ ಅವರೂ ನಮ್ಮವರೇ ಆಗಿದ್ದಾರೆ. ಇದರಿಂದ ಸ್ವಾಮಿ, ಈಗ ಎರಡುವರ್ಷಗಳಲ್ಲಿಯೇ ಏನು ಪರಿಣಾಮವುಂಟಾಗಿದೆ ಎನ್ನುವುದನ್ನು ಈಗಾಗಲೇ ನಾವೆಲ್ಲರೂ ನೋಡಿರುತ್ತೇವೆ. ಈ ಮೂರು ವರ್ಷಗಳಲ್ಲಿ ಒಂದು ಗ್ರಾಮಾಂತರ ಪ್ರದೇಶಕ್ಕಾಗಲಿ ಹೊಸದಾಗಿ ಒಂದು ಸ್ಕೂಲನ್ನು ಕೊಡುವುದಕ್ಕೆ ಆಗಿಲ್ಲ. ಹೀಗಾಗಿ ಈ ಕಳೆದ ಒಂದೂವರೆ ವರ್ಷದಿಂದಲೂ ಒಂದೇಸಮನಾಗಿ ನಮ್ಮ ವಿದ್ಯಾಇಲಾಖೆಯಲ್ಲಿರತಕ್ಕ ಸಂಪತ್ತೆಲ್ಲಾ—ಅಂದರೆ ಸಿಬ್ಬಂದಿ, ಸಾಮಾನು, ಇತ್ಯಾದಿ ಸೌಕರ್ಯಗಳೆಲ್ಲಾ ಆ ಬಳ್ಳಾರಿ ಜಿಲ್ಲೆಗೇ ಹರಿದುಹೋಗುತ್ತಿವೆ. ನಮ್ಮ ದೇಶಕ್ಕೆ ಎಳ್ಳಷ್ಟೂ ಸೌಕರ್ಯವಿಲ್ಲದಂತೆ ಆಗಿದೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ವರಮಾನ ಎಲ್ಲೆಲ್ಲಿಂದ ಬರುತ್ತಿದೆಯೋ ಅಲ್ಲಿಗೆಲ್ಲಾ ಹಣವನ್ನು ಪುನಃ ಹಂಚುತ್ತಿದ್ದಾರೆ; ಅಷ್ಟೇ ಹೊರತು ಮತ್ತೇನೂ ವಿಶೇಷವಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ ಒಂದು ಪಕ್ಷಪಾತ ಮಾಡಿದ್ದಾರೆಂದೇನೂ ನಾನು ಹೇಳುತ್ತಿಲ್ಲ. ಆದರೆ ಇದರಿಂದಾಗತಕ್ಕ ಮುಖ್ಯ ಪರಿಣಾಮವೇನೆಂಬುದನ್ನು ಗಮನಿಸಬೇಕಾಗಿದೆ. ಆದರೆ ಇದೇ ರೀತಿಯಾಗಿ ನಮ್ಮ ಮೈಸೂರಿಗೆ ಮತ್ತೆ ಇತರ ಭಾಗಗಳೇನಾದರೂ ಸೇರಬೇಕಾದರೆ, ಆಗ ಆ ಹೊಸ ಪ್ರದೇಶಗಳೆಲ್ಲಾ ಈಗ ಮೈಸೂರು ಅನುಭವಿಸುತ್ತಿರುವಂಥ ಸೌಲಭ್ಯಗಳನ್ನು ಪಡೆದ ಹೊರತು, ಈ ಮೈಸೂರಿಗೆ ಯಾವ ಹೊಸ ಸೌಲಭ್ಯಗಳನ್ನು ಕಾಣಲೂ ಅವಕಾಶ ವಿರಲಾಗದೆಂದು ಗೊತ್ತಾಗುತ್ತದೆ. ಇದರಿಂದ ಮೈಸೂರಿನ ಜನ ಸೌಲಭ್ಯಗಳನ್ನು ಇನ್ನು ಮುಂದಕ್ಕೆ ಮರೆಯಬೇಕಾಗುತ್ತದೆ.

ಇನ್ನು ಪಶುವೈದ್ಯಶಾಲೆಗಳ ವಿಚಾರ. ಈ ವಿಚಾರದಲ್ಲಿಯೂ ಕೂಡ ಇತರ ಎಲ್ಲಾ ಪ್ರಾಂತಗಳಿಗಿಂತಲೂ ನಮ್ಮ ಮೈಸೂರು ಮುಂದುವರಿದಿದೆ. ಆದರೆ ಈ ದಿವಸ ಹಳ್ಳಿಗಾಡಿನಿಂದ ಬರುತ್ತಿರುವ 'ಜನರು ಜನರ ಆಸ್ಪತ್ರೆ ಕೊಡುವುದು ಸ್ವಲ್ಪ ನಿಧಾನವಾದರೂ ಚಿಂತೆಯಿಲ್ಲ-ಮೊದಲು ದನಗಳ ಆಸ್ಪತ್ರೆಯನ್ನು ಮಂಜೂರು ಮಾಡಿಕೊಡಿ' ಎಂದು ಕೇಳುತ್ತಿದ್ದಾರೆ. ಈ ದಿವಸ ಮೈಸೂರು ಸಂಸ್ಥಾನದಲ್ಲಿ 28,207 ಜಾನುವಾರುಗಳಿಗೆ ಒಂದೊಂದು ಆಸ್ಪತ್ರೆಯಿದ್ದಂತೆ ವ್ಯಕ್ತಪಟ್ಟಿದೆ. ಈಗತಾನೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಮಾನ್ಯ ಸಚಿವರು 25 ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆ ಇದ್ದರೆ ಸಾಕೆಂದು ಹೇಳಿದ್ದಾರೆ. ನಾವು ಈಗೀಗ ಆ ತುದಿ ಮುಟ್ಟಲು ಹತ್ತಿ ಹತ್ತಿರಕ್ಕೆ ಬರುತ್ತಿದ್ದೇವೆ. ಹೈದರಾಬಾದಿನಲ್ಲಿ ಪ್ರತಿ 43,570 ರಾನುಗಳಿಗೆ ಒಂದೊಂದು ಆಸ್ಪತ್ರೆಯಿದೆ. ಬೊಂಬಾಯಿ ಪ್ರಾಂತ್ಯದಲ್ಲಿ 44,245 ಜಾನುವಾರುಗಳಿಗೆ ಒಂದು ಆಸ್ಪತ್ರೆಯಿರುತ್ತದೆ, ಮದರಾಸಿನಲ್ಲಿ ಅಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 111,342 ಜಾನುವಾರುಗಳಿಗೊಂದರಂತೆ ಆಸ್ಪತ್ರೆಯಿರುತ್ತದೆ. ಕೊಡಗಿನಲ್ಲಿ 10,000 ಜಾನುವಾರುಗಳಿಗೆ ಒಂದು ಆಸ್ಪತ್ರೆಯಂತೆ ಆಸ್ಪತ್ರೆಗಳಿರುತ್ತವೆ. ಇದರಿಂದ ನಮಗೇನು ಗೊತ್ತಾಗುತ್ತದೆಯೆಂದರೆ, ಪಶುವೈದ್ಯಸೌಲಭ್ಯಗಳಲ್ಲಿ ಕೂಡ ನಮ್ಮ ಮೈಸೂರು ಸಂಸ್ಥಾನದಷ್ಟು ಹೊರಗಡೆಯ ಪ್ರದೇಶಗಳು ಮುಂದುವರಿದಿಲ್ಲವೆಂದು ತಿಳಿದು ಬರುತ್ತದೆ. ನಮ್ಮಲ್ಲಿ ಈ ವೈದ್ಯ ಸೌಲಭ್ಯಗಳೇನೋ ಸ್ವಲ್ಪ ಅನುಕೂಲವಾಗಿಯೇ ಇರುತ್ತವೆ. ನಾವಿನ್ನೂ ಸ್ವಲ್ಪ ಹೆಚ್ಚಿನ ಪ್ರಯತ್ನಪಟ್ಟರೆ ನಾವು ಈ ಬಾಬಿನಲ್ಲಿ ಆ ಗುರಿಯನ್ನು ಬೇಗ ಮುಟ್ಟಬಹುದು. ಏನೋ ಒಂದು ವಾದಕ್ಕೋಸ್ಕರವಾಗಿ ವಾದ ಮಾಡಬೇಕೆಂಬ ಉದ್ದೇಶದಿಂದ ಆ ಪ್ರಾಂತ್ಯಗಳಲ್ಲಿ ಈ ಜಾನುವಾರುಗಳಿಗೆ ಕಾಯಿಲೆಯೇ ಬರುವುದಿಲ್ಲ ಎಂದು ಒಂದು ವಾದ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೆ ಈ ಮದರಾಸ್, ಬೊಂಬಾಯಿ, ಹೈದರಾಬಾದ್ ಸರ್ಕಾರಗಳು ಆ ಪ್ರದೇಶಗಳನ್ನೆಲ್ಲಾ ಉಪೇಕ್ಷೆಮಾಡಿದ್ದಾರೆಂದು ಬೇರೆ ಹೇಳುತ್ತಿದ್ದಾರೆ. ಹೀಗೆಲ್ಲಾ ಹೇಳುತ್ತಾ ಅವರು ಈ ಭಾಗಗಳ ಅಭಿವೃದ್ಧಿಗೆ ಸಾಕಷ್ಟು ಗಮನಕೊಡದೆ ಹೋದುದರಿಂದಲೂ, ಈ ಭಾಗಗಳೆಲ್ಲಾ ಹರಿದು ಹಂಚಿ ಹೋಗಿರುವ ಕಾರಣದಿಂದಲೂ ಈ ಪ್ರದೇಶಗಳು ಬೇರೆ ದೇಶದಮಟ್ಟಕ್ಕೆ ಬರಲು ಸಾಧ್ಯವಾಗಲಿಲ್ಲ ಎಂದು ಹೇಳುತ್ತಿದ್ದಾರೆ. ಹೀಗೆ ಇವರು ಮಾಡುತ್ತಿರುವ ವಾದಗಳು ಒಂದಕ್ಕೊಂದು ವಿರೋಧವಾಗಿರುತ್ತವೆ. ಇದನ್ನೆಲ್ಲಾ ನಾವು ಪರಿಶೀಲನೆಮಾಡಿ ನೋಡಿದರೆ ನಮ್ಮ ಸಂಸ್ಥಾನ ಬೇಕಾದಷ್ಟು ಹಣವನ್ನು ಈ ಬಾಬಿಗಾಗಿ ಖರ್ಚುಮಾಡಿ ಈ ಆಸ್ಪತ್ರೆ ಸೌಕರ್ಯಗಳನು ಂಟುಮಾಡಿದೆಯೆಂಬುದು ಗೊತ್ತಾಗುತ್ತದೆ. ಇದೇ ಸಂಬಂಧದಲ್ಲಿ ರಾಯಲ್ ಕಮಿಷನ್ನಿನವರು ಏನು ಹೇಳಿದ್ದಾರೆಂಬುದರ ಬಗ್ಗೆ 78ನೇ ಪುಟದಲ್ಲಿ ಹೀಗೆ ಹೇಳಿದ್ದಾರೆ: "ವ್ಯವಸಾಯದ ಸಂಬಂಧದಲ್ಲಿ ನಿಯೋಜಿಸಲಾದ ರಾಯಲ್ ಕಮಿಷನ್ನಿನವರು ಪ್ರತಿ 25,000 ದನಗಳಿಗೆ ಒಂದು ಪಶುವೈದ್ಯಶಾಲೆ ಇರತಕ್ಕದ್ದೆಂದು ನಿಖರಮಾಡಿದ್ದಾರೆ. ಹೈದರಾಬಾದ್‌ನಲ್ಲಿರತಕ್ಕ ಕನ್ನಡ ಜಿಲ್ಲೆಗಳಲ್ಲಿ 31 ಸಂಚಾರ ಮಾಡತಕ್ಕ ಬಿಲೆಟ್ ಆಸ್ಪತ್ರೆಗಳಿವೆ. ಬಹುಮಟ್ಟಿಗೆ ಇವು ಚಲಿಸುವ ಆಸ್ಪತ್ರೆಗಳಾದುದರಿಂದ ಸ್ಥಿರವಾಗಿರುವ ಪಶುವೈದ್ಯಶಾಲೆಗಳಷ್ಟು ಸೌಕರ್ಯಗಳನ್ನು ಒದಗಿಸಲು ಅವುಗಳಿಗೆ ಸಾಧ್ಯವಿರುವುದಿಲ್ಲ. ಅದೇ ರೀತಿಯಲ್ಲಿಯೇ ಬೊಂಬಾಯಿ ರಾಜ್ಯದ ಕನ್ನಡ ಡಿಸ್ಟ್ರಿಕ್ಟುಗಳಲ್ಲಿಯೂ ಸ್ಥಳೀಯ ಸಂಸ್ಥೆಗಳವರು ನಡೆಸಿಕೊಂಡು ಬರುತ್ತಿರುವ 32 ಡಿಸ್ಪೆನ್ಸರಿಗಳೂ, ಐದು ಸಣ್ಣ ಡಿಸ್ಪೆನ್ಸರಿಗಳೂ ಮತ್ತು ಆರು ಸ್ಟಾಕ್‌ಮೆನ್ ಸೆಂಟರುಗಳೂ ಇರುತ್ತವೆ. ಸರ್ಕಾರದ ಡಿಸ್ಪೆನ್ಸರಿಗಳು 31 ಮಾತ್ರ ಇರುತ್ತವೆ. ಗೊತ್ತುಪಡಿಸಿರುವ ಮಟ್ಟವನ್ನು ಮುಟ್ಟಬೇಕಾದರೆ ಮೊದಲು ಸಂಚಾರದ ಡಿಸ್ಪೆನ್ಸರಿಗಳನ್ನೂ, ಡಿಸ್ಟ್ರಿಕ್ಟ್ ಬೋರ್ಡು ಡಿಸ್ಪೆನ್ಸರಿಗಳನ್ನೂ ಮತ್ತು ಸ್ಟಾಕ್‌ಮೆನ್ ಡಿಸ್ಪೆನ್ಸರಿಗಳನ್ನೂ ತೆಗೆದುಹಾಕಿ ಅವುಗಳ ಜಾಗದಲ್ಲಿ ಖಾಯಂ ಆದ ಪಶುವೈದ್ಯಶಾಲೆಗಳನ್ನು ಏರ್ಪಡಿಸುವುದೂ ಮತ್ತು ಅವುಗಳ ಸಂಖ್ಯೆಯನ್ನು ಇಮ್ಮಡಿಯಾಗಿ ಹೆಚ್ಚಿಸುವುದೂ ಅವಶ್ಯಕ. ಇದರಿಂದ ಬಂಡವಾಳದ ವೆಚ್ಚದ ಬಾಬ್ತು, ಕಟ್ಟಡಗಳಿಗಾಗಿಯೂ ಮತ್ತು ಸಲಕರಣೆಗಳಿಗಾಗಿಯೂ 10 ಲಕ್ಷ ರೂಪಾಯಿಗಳನ್ನು ಮತ್ತು ಅವುಗಳನ್ನು ಸುರಕ್ಷಿತವಾಗಿ ನಡೆಸಿಕೊಂಡು ಬರುವುದಕ್ಕಾಗಿ ಮೂರುವರೆ ಲಕ್ಷ ರೂಪಾಯಿಗಳ ಆವೃತ್ತ ವೆಚ್ಚವನ್ನೂ ಒದಗಿಸಬೇಕಾಗುವುದು" ಎಂಬುದಾಗಿ ತಿಳಿಸಿದ್ದಾರೆ. ಹೀಗೆ ಪ್ರತಿಯೊಂದು ಬಾಬಿನಲ್ಲೂ ನಮ್ಮ ದೇಶ ಈ ದಿವಸ ನಡೆಸಿರತಕ್ಕಂಥ ಜನೋಪಯುಕ್ತ ಬಾಬುಗಳು ಯಾವುವಿವೆಯೋ ಅವುಗಳನ್ನೆಲ್ಲಾ ಪರಿಶೀಲನೆಮಾಡಿ ನೋಡಿದ್ದೇ ಆದರೆ, ಈ ನಮ್ಮ ಮೈಸೂರಿನ ಮಟ್ಟಕ್ಕೆ ಇತರ ಹೊರಗಿನ ಭಾಗಗಳನ್ನು ತರಬೇಕಾಗಿದ್ದರೆ ನಾವು ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಬೇಕಾಗಿರುತ್ತದೆಂಬುದಾಗಿ ಕಂಡುಬರುತ್ತದೆ. ಈಗ ನಮ್ಮ ದೇಶದಲ್ಲಿ ಏನು ಸೌಲಭ್ಯಗಳನ್ನು ಸರ್ಕಾರ ತನ್ನ ಪ್ರಜೆಗಳಿಗೆ ಒಸಗಿಸುತ್ತಿದೆಯೋ ಅವುಗಳನ್ನು ಇನ್ನುಮುಂದೆ ಮುಂದುವರಿಸಿಕೊಂಡು ಬರುವುದಕ್ಕೂ ಬಹಳ ಕಷ್ಟವಾಗುತ್ತಿದೆ ಮತ್ತು ಅವುಗಳನ್ನು ಉಳಿಸಿಕೊಳ್ಳಲು ಮತ್ತಷ್ಟು ಕಷ್ಟವಿದೆ.

ಇನ್ನು ಸಹಕಾರದ ವಿಚಾರವಾಗಿಯೂ ಅಂಕಿ ಅಂಶಗಳನ್ನೊದಗಿಸಿದ್ದಾರೆ. ಈ ಸಹಕಾರ ಸಂಘಗಳ ವಿಚಾರದಲ್ಲಿ ಬೇರೆ ಪ್ರದೇಶಗಳಲ್ಲಿ ಇಲ್ಲಿಗಿಂತಲೂ ಹೆಚ್ಚು ಸಂಸ್ಥೆಗಳಿರುತ್ತವೆಂಬುದಾಗಿ ಹೇಳಿದ್ದಾರೆ. ಹೀಗೆ ಈ ಸಮಿತಿಯವರು ಇದ್ದ ವಿಚಾರಗಳನ್ನು ಇದ್ದ ಹಾಗೆಯೇ ತಿಳಿಸಿದ್ದರೂ ಕೂಡ ಈ ಸಮಿತಿಯವರು ನಿಜಾಂಶವನ್ನು ಹೇಳಿರುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಯಾವ ವಿಚಾರವಾಗಿ ನಿಜಾಂಶವನ್ನು ಹೇಳಿಲ್ಲ ಎನ್ನುವುದನ್ನು ಮಾತ್ರ ತಿಳಿಸುತ್ತಿಲ್ಲ. ಹೀಗೆ ಎಲ್ಲೆಲ್ಲಿ ಇವರು ಮಾಡತಕ್ಕವಾದಕ್ಕೆ ಈ ಸಮಿತಿಯವರ ವಾದ ಸರಿಯಾಗಿ ಇವರ ಅಭಿಪ್ರಾಯಗಳನ್ನೇ ಪ್ರತಿಬಿಂಬಿಸುವುದಿಲ್ಲವೋ ಅಲ್ಲೆಲ್ಲಾ ಈ ಮಾನ್ಯ ಸದಸ್ಯರುಗಳು ಈ

(ಶ್ರೀ ಕೆ ಪುಟ್ಟಸ್ವಾಮಿ.)

ಸಮಿತಿಯವರ ಅಭಿಪ್ರಾಯದ ಮೇಲೆ ಎಗರಿ ಬಿದ್ದಿದ್ದಾರೆ: ಈ ಮೈಸೂರಿನ ಪ್ರಗತಿಯ ಬಗ್ಗೆ ಕೆಲವು ಮಾನ್ಯ ಸದಸ್ಯರು ವಾದಮಾಡುತ್ತ ಈ ಅಭಿವೃದ್ಧಿ ಕಾರ್ಯಗಳೆಲ್ಲಾ "ಬಾರೋಡ್ ಕ್ಯಾಪಿಟಲ್ ಮೇಲೆ ನಡೆಸಲಾಗುತ್ತಿದೆ' ಎಂದು ಒಂದು ವಾದ ಮಾಡಿದ್ದಾರೆ. ಆದರೆ ಹೀಗೆ ಹೇಳಿರತಕ್ಕದ್ದು ಸತ್ಯಾಂಶಕ್ಕೆ ದೂರವಾಗಿದೆ. ಈ ಜನೋಪಯುಕ್ತ ಕಾರ್ಯಗಳನ್ನೆಲ್ಲಾ ನಮ್ಮ ಸರ್ಕಾರ ಹೊರಗಡೆಯಿಂದ ಎಲ್ಲಿಂದಲೋ ಸಾಲ ಮಾಡಿ ತಂದ ಕ್ಯಾಪಿಟಲ್ ಮೇಲೆ ಈ ಕಾರ್ಯಗಳೊಂದನ್ನೂ ಮಾಡಿಲ್ಲ ನಮ್ಮ ದೇಶದ ಹಣದಿಂದಲೇ ನಡಿಸಲ್ಪಟ್ಟಿರುತ್ತವೆಂಬುದು ಕನ್ನಡಿ ಹಿಡಿದಹಾಗೆ ಕಾಣುತ್ತದೆ. ಹೀಗೆ ನಮ್ಮ ಮೈಸೂರು ಪ್ರಗತಿ ಮಾರ್ಗದಲ್ಲಿ ಅಕ್ಷಯಪಾತ್ರೆಯೋಪಾದಿಯಲ್ಲಿ ತನ್ನ ಕೆಲಸ ಕಾರ್ಯಗಳನ್ನು ನೆರವೇರಿಸಿಕೊಂಡು ಬರುತ್ತಿದ್ದಾಗ್ಯೂ ಕೆಲವು ಮಾನ್ಯ ಸದಸ್ಯರು ಪಕ್ಷಪಾತ ಭಾವನೆಯಿಂದ ಈ ಕಾರ್ಯಗಳೆಲ್ಲಾ ಹೊರಗಡೆಯಿಂದ ಸಾಲ ಮಾಡಿ ತಂದಂಥ ಕ್ಯಾಪಿಟಲ್ ಮೇಲೆ ನಡೆಸಲ್ಪಟ್ಟಂಥವುಗಳಾಗಿರುತ್ತವೆಂದು ಓದಿ, ಅದರಮೇಲೆ ವ್ಯಾಖ್ಯಾನ ಮಾಡಿ ಈ ಸಮಿತಿಯವರು ಸರಿಯಾಗಿ ಕೆಲಸಮಾಡಿಲ್ಲ ಎಂದು ಹೇಳಿರುತ್ತಾರೆ. ಹೀಗೆ ಅವರು ಮಾಡಿರತಕ್ಕಂಥ ವಾದಗಳಲ್ಲೇನೂ ಹುರುಳಿಲ್ಲ.

ಇನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿ ವಿಚಾರ. ಬಹುಶಃ ಈ ವಿಚಾರದಲ್ಲಿ ಅಷ್ಟೇನೂ ಹೆಚ್ಚಿನ ವಾದ ಮಾಡಬೇಕಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ದಿವಸ ಮೈಸೂರಿನಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿಯನ್ನು ನಮ್ಮ ದೇಶ ಒಂದಕ್ಕೇ ಅಲ್ಲದೆ ಅಕ್ಕಪಕ್ಕದ ದೇಶಗಳಿಗೂ ಕೂಡ ಒದಗಿಸುತ್ತಿದ್ದೇವೆ. ಈ ದಿವಸ ಮೈಸೂರು ದೇಶ ಇಷ್ಟು ಪ್ರಗತಿಗೆ ಬರಬೇಕಾಗಿದ್ದರೆ ಮೈಸೂರಿನಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿಯೇ ಮುಖ್ಯಕಾರಣ. ಆದರೆ ನಮ್ಮ ಸರ್ಕಾರಕ್ಕೆ ಯಾವ ಅಂಥ ಬಲವತ್ತರವಾದ ಕಾರಣಗಳಿದ್ದವೋ ನನಗೆ ಅದು ತಿಳಿಯದು, ಅಂತೂ ನಮ್ಮ ಸರ್ಕಾರ ಈ ದಿವಸ ವಿದ್ಯುಚ್ಛಕ್ತಿಯನ್ನು ಬೊಂಬಾಯಿ, ಮದರಾಸ್ ಇತ್ಯಾದಿ ಪ್ರಾಂತ್ಯಗಳಿಗೆ ಒದಗಿಸುವ ಒಪ್ಪಂದಕ್ಕೆ ಒಪ್ಪಿಕೊಂಡಿದೆ. ಈಗಾಗಲೇ ವಿದ್ಯುಚ್ಛಕ್ತಿಯನ್ನೂ ಹೊರಗಡೆಗೆ ಕೊಡುತ್ತಿದ್ದಾರೆ. ಆದರೆ ನಾನು ಅಭಿಪ್ರಾಯ ಪಡತಕ್ಕ ರೀತಿಯಲ್ಲಿ ಈ ಪವರನ್ನೂ ಸಹ ನಮ್ಮ ಮೈಸೂರಿನ ಹಿತ ದೃಷ್ಟಿಯಿಂದ ಹೊರಗಿನವರಿಗೆ ಕೊಡಬಾರದಾಗಿತ್ತೆಂದು ಹೇಳುತ್ತೇನೆ.

ಇನ್ನು ನೀರಾವರಿ ಯೋಜನೆಗಳ ವಿಚಾರ: ಈ ಬಗ್ಗೆ ಮೈಸೂರು ಬಹಳ ಮುಂದುವರಿದಿದೆ. ಆದರೆ ಹೊರಗಡೆ ಬಾಕಿ ಪ್ರದೇಶಗಳಲ್ಲಿ ಅಂಥಾ ಹೇಳಿಕೊಳ್ಳುವಂಥ ನೀರಾವರಿ ಯೋಜನೆಗಳು ಯಾವುವೂ ಇಲ್ಲ. ಈ ನಮ್ಮ ಮೈಸೂರಿನಲ್ಲಿ ಈ ನೀರಾವರಿ ಯೋಜನೆಗಳೂ ಮತ್ತು ವಿದ್ಯುಚ್ಛಕ್ತಿಯೂ ಇಷ್ಟೊಂದು ಯಥೇಷ್ಟವಾದ ರೀತಿಯಲ್ಲಿ ದೊರೆಯುವಹಾಗೆ ಮಾಡಲು ನಮ್ಮ ಪೂರ್ವಿಕರು ಇದಕ್ಕೆಲ್ಲಾ ಬಹಳ ತ್ಯಾಗಮಾಡಿದ್ದಾರೆ. ಹಿಂದೆ ಈ ಸಂಸ್ಥಾನದ ಉತ್ಪತ್ತಿ ಕೇವಲ ಮೂರು ಕೋಟಿ ರೂಪಾಯಿಗಳಿತ್ತು ಅಂಥ ಕಾಲದಲ್ಲೇ ಕೃಷ್ಣರಾಜಸಾಗರ ಅಣೆಕಟ್ಟನ್ನು ಕಟ್ಟಲು ನಮ್ಮ ಸರ್ಕಾರ ಹಣವನ್ನು ಒದಗಿಸಿತು. ಹೀಗೆ ಬಹಳ ತ್ಯಾಗದಿಂದ ಮತ್ತು ಬಹಳ ಕಷ್ಟದಿಂದ ನಾವು ಈ ಆಸ್ತಿಯನ್ನು ರೂಢಿಸಿದ್ದೇವೆ. ಬೇರೆಕಡೆ ಈ ಆಸ್ತಿ ರೂಢಿಸಿಲ್ಲ. ಕೆಲವು ಕಡೆ ಸೌಲಭ್ಯ ಇರಬಹುದು. ಕೆಲವು ಕಡೆ ಸೌಲಭ್ಯ ಇಲ್ಲದೆ ಇರಬಹುದು. ಈ ಆಸ್ತಿಯನ್ನು ರೂಢಿಸಬೇಕಾದರೆ ಎಷ್ಟು ಖರ್ಚು ತಗಲುತ್ತದೆ. ಎಷ್ಟೊಂದು ಕಷ್ಟವಾಗುತ್ತದೆ ಎನ್ನುವುದನ್ನು ವಿಸ್ತಾರವಾಗಿ ವರ್ಣಿಸಬೇಕಾಗಿಲ್ಲ. ಪ್ರಕೃತಿ ಸಂಪತ್ತು ಮತ್ತು ಕೈಗಾರಿಕೆಗಳಲ್ಲಿಯೂ ಕೂಡ ನಮ್ಮ ದೇಶ ಮುಂದುವರಿದ ದೇಶ. ವಿದ್ಯುಚ್ಛಕ್ತಿ ಸುಲಭವಾಗಿ ಸಿಕ್ಕುತ್ತಾ ಇರುವುದರಿಂದ ಅನೇಕ ಕೈಗಾರಿಕೆಗಳನ್ನು ಸ್ಥಾಪನೆಮಾಡಿದ್ದೇವೆ. ಇಂಡಿಯಾ ದೇಶದಲ್ಲಿ ಮೈಸೂರುದೇಶ ಈಗಾಗಲೇ ಮುಂದುವರಿದಂಥ ದೇಶ. ಹೊರಗಡೆ ಕನ್ನಡ ಮಾತನಾಡತಕ್ಕ ಜಿಲ್ಲೆಗಳಲ್ಲಿ ಇಷ್ಟು ಕೈಗಾರಿಕೆಗಳಿಲ್ಲ. ಅಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾದರೆ, ಅದಕ್ಕೆ ಬೇಕಾದಂಥ ವಿದ್ಯುಚ್ಛಕ್ತಿ, ಅದಕ್ಕೆ ಬೇಕಾದಂಥ ಸಿಬ್ಬಂದಿ ಅದನ್ನೆಲ್ಲಾ ಒದಗಿಸಿ ಅಲ್ಲಿಯೂ ಕೂಡ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಬೇಕಾದರೆ ಅದಕ್ಕೂ ಬಹಳವಾಗಿ ಹಣ ಖರ್ಚಾಗುತ್ತದೆ.

ಇನ್ನು ನಮ್ಮಲ್ಲಿರತಕ್ಕಂಥ ಪ್ರಕೃತಿ ಸಂಪತ್ತಿನ ವಿಚಾರ. ಪ್ರಕೃತಿ ಸಂಪತ್ತನ್ನು ಮೈಸೂರು ದೇಶದ ಜೊತೆಯಲ್ಲಿ ಹೋಲಿಸಿದರೆ ಅಲ್ಲಿಯ ಪ್ರಕೃತಿ ಸಂಪತ್ತು ಯಾವ ಹೋಲಿಕೆಗೂ ಬಾರದಂತಿದೆ. South Canara ಜಿಲ್ಲೆಯನ್ನು ಬಿಟ್ಟರೆ ಬೇರೆ ಯಾವ ಜಿಲ್ಲೆಯಲ್ಲೂ ಯಾವ ಸಂಪತ್ತೂ ಇಲ್ಲ.

A MEMBER.—What about minerals ?

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನು Minerals ವಿಚಾರ ಪ್ರಸ್ತಾಪ ಮಾಡುತ್ತೇನೆ. ಅಲ್ಲಿರತಕ್ಕಂಥ ಖನಿಜ ಸಂಪತ್ತು ಯಾವುದು ಇದೆ ಎನ್ನುವುದನ್ನು ಖಚಿತವಾಗಿ ಶೋಧನೆಮಾಡಿಲ್ಲ. ಖನಿಜ ಸಂಪತ್ತು ಇರಬಹುದು ಎನ್ನುವ ರೀತಿಯಲ್ಲಿದೆ. ಮೈಸೂರು ದೇಶವನ್ನೊಳಗೊಂಡಂಥ ಕರ್ಣಾಟಕ ಖನಿಜ ಸಂಪತ್ತಿನ ವಿಷಯದಲ್ಲಿ ಇಂಡಿಯಾ ದೇಶದಲ್ಲಿ ಎರಡನೆಯದಾಗಿದೆ ಎಂದು ಹೇಳುವುದಕ್ಕೆ ಅವಕಾಶವಿದೆ. ಕನ್ನಡ ಮಾತನಾಡುವ ಇತರ ಭಾಗಗಳಲ್ಲಿ ಯಾವ ಯಾವ ಖನಿಜ ಸಂಪತ್ತು ಇದೆ ಎನ್ನುವುದು ಗೊತ್ತಿಲ್ಲ.

ಇನ್ನು ಆದಾಯ ವೆಚ್ಚದ ವಿಚಾರ. ಆದಾಯ ವೆಚ್ಚದ ವಿಚಾರದಲ್ಲಿ ಶ್ರೀವಾರ್ ಕಂಠಿಯವರು "ಈ ವರದಿಯಲ್ಲಿ ಅನೇಕ ಅಂಶಗಳನ್ನು ಬಿಟ್ಟಿದ್ದಾರೆ. ಕೊಟ್ಟಿರುವ ಅಂಕಿ ಅಂಶಗಳು ಸರಿಯಾದುವಲ್ಲ" ಎಂದು ಅವರು ಪತ್ರಿಕೆಯಲ್ಲಿ ಬರೆದಂಥ ಲೇಖನದಲ್ಲಿ ಹೇಳಿದ್ದಾರೆ. ಹೈದರಾಬಾದ್, ಗುಲ್ಬರ್ಗ, ರಾಯಚೂರು, ಬಿದರೆ, ಬೆಳಗಾಂ, ಬಿಜಾಪುರ, ಧಾರ್ವಾಡ, ಉತ್ತರ ಕನ್ನಡ, ದಕ್ಷಿಣಕನ್ನಡ, ಕೊಡಗು, ಈ ಪ್ರಾಂತಗಳಲ್ಲಿ 97,16,485 ರೂಪಾಯಿಗಳು ಉತ್ಪತ್ತಿ; ಖರ್ಚು 10,79,61,485 ರೂಪಾಯಿಗಳು; ಇದರಿಂದ ಸಾಲದೇ ಬರುವ ಹಣ ಇಲ್ಲ ಸುಮಾರು 1,07,96,629 ರೂಪಾಯಿಗಳು; ಸರಾಸರಿ ಖರ್ಚಾಗುತ್ತಾ ಇರತಕ್ಕಂಥಾದ್ದು, ತಲಾ ಒಂದಕ್ಕೆ ಎಷ್ಟು ಎಂಬುದನ್ನು ತಾವು ನೋಡಿ. ಹೈದರಾಬಾದಿನಲ್ಲಿ ಶೇಕಡ 6 ರೂಪಾಯಿ, ಬೊಂಬಾಯಿನಲ್ಲಿ ಶೇಕಡ 14 ರೂಪಾಯಿ, ಮೈಸೂರಿನಲ್ಲಿ ಶೇಕಡ 20 ರೂಪಾಯಿ ಚಿಲ್ಲರೆ. ಈಗ ಶೇಕಡ 6 ರೂಪಾಯಿ, ಶೇಕಡ 14 ರೂಪಾಯಿಯಂತೆ ಅಷ್ಟೊಂದು ಕನಿಷ್ಠ ಮಿತಿಯಲ್ಲಿ ಖರ್ಚು ಮಾಡುತ್ತಿದ್ದರೂ, ಆದಾಯ ವೆಚ್ಚದ ಪರಿಣಾಮ ಏನೆಂದರೆ 1 ಕೋಟಿ 7 ಲಕ್ಷ ರೂಪಾಯಿಗಳಷ್ಟು ಖೋತಾ ಆಗಿದೆ. ಅಂಕಿ ಅಂಶಗಳನ್ನು ಪರಿಶೀಲನಮಾಡದೆ, ಅದೂ ಇಲ್ಲೂ ಖೋತಾ ಎಂದು ಹೇಳುವುದು ಸರಿಯಲ್ಲ. ಮೈಸೂರಿನಲ್ಲಿ Capital expenditure ಬಗ್ಗೆ ಎಷ್ಟು ಖರ್ಚುಮಾಡುತ್ತಿದ್ದೇವೆಂಬುದನ್ನು ನೋಡಬೇಕು. ಅಲ್ಲಿರತಕ್ಕಂಥ ಪಾಠಶಾಲೆಗಳು, ಅಲ್ಲಿರತಕ್ಕಂಥ ಆಸ್ಪತ್ರೆಗಳು, ಅಲ್ಲಿರ

ತಕ್ಕಂಥ ರಸ್ತೆಗಳು, ಅಲ್ಲಿಗೆ ಬೇಕಾಗಿರತಕ್ಕಂಥ ರಕ್ಷಣೆ ಮತ್ತು ಸಾರ್ವಜನಿಕ ನೆಮ್ಮದಿ ವಗ್ಗೈರೆ ಇವಕ್ಕೋಸ್ಕರ ಖರ್ಚು ಮಾಡತಕ್ಕದ್ದು 10,79,00,000 ರೂಪಾಯಿಗಳು ಚಿಲ್ಲರೆ. ಅವುಗಳಿಗೆ ಬರತಕ್ಕ ಆದಾಯ 9 ಕೋಟಿ 71 ಲಕ್ಷ ರೂಪಾಯಿಗಳು ಚಿಲ್ಲರೆ. ಇಷ್ಟರಿಂದಲೇ 1 ಕೋಟಿ 7 ಲಕ್ಷ ಖೋತಾ ಆಗುತ್ತದೆ. ಆದರೆ ಮೈಸೂರು ದೇಶದಲ್ಲಿ ಇರುವಹಾಗೆ ಪಾಠಶಾಲೆಗಳು, ಉದ್ದವಾದ ರಸ್ತೆಗಳು, ಆಸ್ಪತ್ರೆಗಳು ಮತ್ತು ಜನಾರೋಗ್ಯ ರಕ್ಷಣೆ, Public Health Units ಇವನ್ನೆಲ್ಲಾ ಏರ್ಪಾಡು ಮಾಡಿದರೆ ಎಷ್ಟು ಖೋತಾ ಆಗುತ್ತದೆ ಎಂಬುದನ್ನು ಊಹೆ ಮಾಡುವುದಕ್ಕೂ ಕೂಡ ಕಷ್ಟವಾಗುತ್ತದೆ. ಇನ್ನೂ ಹತ್ತು ಕೋಟಿ ಒದಗಿಸಿದರೂ ಕೂಡ ಅವನ್ನೆಲ್ಲಾ ನಾವು ಮಾಡುವುದಕ್ಕಾಗುತ್ತದೆಯೋ ಇಲ್ಲವೋ.

ದಕ್ಷಿಣ ಕನ್ನಡವನ್ನು ಬಿಟ್ಟು, ಒಟ್ಟಿನಲ್ಲಿ ಸುಮಾರು 108 ಲಕ್ಷ ರೂಪಾಯಿಗಳು ಕೊರತೆಯಾಗಿರುವುದು ಕಂಡುಬರುತ್ತದೆ. ಸಾಮಾಜಿಕ ಕಾರ್ಯಗಳಿಗೂ ಮತ್ತು ರಾಷ್ಟ್ರೀಯ ನಿರ್ಮಾಣ ಕಾರ್ಯಗಳಿಗೂ, ಅದರಲ್ಲೂ ಹೈದರಾಬಾದ್ ರಾಜ್ಯದಲ್ಲಿ ವೆಚ್ಚವನ್ನು ಹೆಚ್ಚಿಸುವುದರಿಂದ ಬರುವ ವರ್ಷಗಳಲ್ಲಿ ಕೊರತೆ ಮೊಬಲಗು ಇನ್ನು ಹೆಚ್ಚಾಗಲೇ ಬೇಕಾಗಿದೆ.

ವೆಚ್ಚವು ಒಬ್ಬೊಬ್ಬರ ವಿಷಯದಲ್ಲಿ ಎಷ್ಟೆಷ್ಟು ಬೀಳುವುದೆಂದು ಲೆಖ್ಖಮಾಡಿದರೆ ಅದು 1952-53ನೆಯ ಸಾಲಿನಲ್ಲಿ ಹೈದರಾಬಾದಿನ ಕನ್ನಡ ಡಿಸ್ಟ್ರಿಕ್ಟುಗಳಲ್ಲಿ 6.00 ರೂಪಾಯಿಗಳಾಗುವುದೆಂದೂ ಬೊಂಬಾಯಿನ ಕನ್ನಡ ಡಿಸ್ಟ್ರಿಕ್ಟುಗಳಲ್ಲಿ 14·65 ರೂಪಾಯಿಗಳಾಗುವುದೆಂದೂ ಕೊಡಗಿನಲ್ಲಿ 34·16 ರೂಪಾಯಿಗಳಾಗುವುದೆಂದೂ ಮತ್ತು ಮೈಸೂರಿನಲ್ಲಿ 19·86 ರೂಪಾಯಿಗಳಾಗುವುದೆಂದೂ ಗೊತ್ತಾಗುತ್ತದೆ.

1950-51ನೆಯ ಸಾಲಿನಿಂದ 1952.53ನೆಯ ಸಾಲಿನವರೆಗೆ ಮೂರು ವರ್ಷಗಳಲ್ಲಿ ಉಂಟಾದ ಬಂಡವಾಳದ ವೆಚ್ಚವು ಹೈದರಾಬಾದಿನ ಮತ್ತು ಮುಂಬಯಿಯ ಕನ್ನಡ ಡಿಸ್ಟ್ರಿಕ್ಟುಗಳಲ್ಲಿ 15,43,45,000 ರೂಪಾಯಿಗಳಾಗುವುದು; ಹೈದರಾಬಾದಿನಲ್ಲಿ 11,23,72,000 ರೂಪಾಯಿಗಳೂ ಮತ್ತು ಮುಂಬಯಿಯಲ್ಲಿ 4,19,73,000 ರೂಪಾಯಿಗಳೂ ಆಗುವುದು. ಈಬಾರಿ ವೆಚ್ಚದ ಬಹುಭಾಗವನ್ನು ಹೈದರಾಬಾದಿನಲ್ಲಿರುವ ತುಂಗಭದ್ರಾ ಯೋಜನೆಗಾಗಿ ವಿನಿಯೋಗಿಸಲಾಯಿತೆಂದು ಸುಲಭವಾಗಿ ಊಹಿಸಬಹುದಾಗಿದೆ. ಅಂತೆಯೇ ಈ ಬಂಡವಾಳ ವೆಚ್ಚದ ಅರ್ಧಭಾಗವನ್ನು ಮುಂಬಯಿಯ ಘಟಪ್ರಭ ಯೋಜನೆಗಾಗಿ ವಿನಿಯೋಗಿಸಿರಬೇಕೆಂದೂ ಊಹಿಸಬಹುದಾಗಿದೆ. ಇದಕ್ಕೆ ಮೇಲ್ಪಟ್ಟು ಎಷ್ಟು ವೆಚ್ಚವು ವರಮಾನವನ್ನು ಕೊಡುವಂತಹ ಕೆಲಸಗಳಿಗಾಗಿಯೂ, ಎಷ್ಟು ವೆಚ್ಚವು ಸಮಾಜಾಭಿವೃದ್ಧಿ ಕಾರ್ಯಗಳಿಗಾಗಿಯೂ ಆಗಿದೆ ಯೆಂಬುದನ್ನು ಹೇಳುವುದಕ್ಕೆ ಸಾಧ್ಯವಿರುವುದಿಲ್ಲ. ಕೇವಲ ದೊಡ್ಡ ದೊಡ್ಡ ನೀರಾವರೀ ಮತ್ತು ವಿದ್ಯುಚ್ಛಕ್ತಿ ಯೋಜನೆಗಳನ್ನೇ ಪರಿಗಣಿಸುವುದಾದರೆ ಸದ್ಯದ ಅಂದಾಜುಗಳ ಮೇರೆಗೆ ತುಂಗಭದ್ರ ನೀರಾವರೀ ಯೋಜನೆಯ ಸಂಬಂಧದಲ್ಲಿ 11 ಕೋಟಿ ರೂಪಾಯಿಗಳ ವೆಚ್ಚವೂ ಮತ್ತು ತುಂಗಭದ್ರ ಹೈಡ್ರೋ-ಎಲೆಕ್ಟ್ರಿಕ್ ಯೋಜನೆಯ ಸಂಬಂಧದಲ್ಲಿ 4 ಕೋಟಿ ರೂಪಾಯಿಗಳ ವೆಚ್ಚವೂ, ರಾಜಾಲ ಬಂಡ ಯೋಜನೆಯ ಸಂಬಂಧದಲ್ಲಿ ಒಂದು ಕೋಟಿ ರೂಪಾಯಿಗಳ ವೆಚ್ಚವೂ ಮತ್ತು ಘಟಪ್ರಭ ಯೋಜನೆಯ ಸಂಬಂಧದಲ್ಲಿ ಮೂರು ಕೋಟಿ ರೂಪಾಯಿಗಳ ವೆಚ್ಚವೂ ಆಗುವುದಾಗಿದೆ. ಇದಕ್ಕೆ ಮುಂಬಯಿಯ ಕನ್ನಡ ಡಿಸ್ಟ್ರಿಕ್ಟುಗಳಲ್ಲಿ ಜೋಗ್ ವಿದ್ಯುಚ್ಛಕ್ತಿಯ ಸಂಬಂಧದಲ್ಲಿ ಆಗುವ ವೆಚ್ಚವನ್ನು ಸೇರಿಸಿಕೊಳ್ಳಬೇಕಾಗಿದೆ. ಸಮಾಜ ಕಾರ್ಯಗಳಿಗೆ ತಗಲುವ ವೆಚ್ಚವನ್ನು ಬಿಟ್ಟು ಒಟ್ಟಿನಲ್ಲಿ ಸರಾಸರಿ ಸುಮಾರು 20 ಕೋಟಿ ರೂಪಾಯಿಗಳು ವೆಚ್ಚವಾಗುವುದಾಗಿದೆ. ತುಂಗಭದ್ರ ಯೋಜನೆಯ ಆಶ್ರಯದ ಪ್ರದೇಶದ ಅಭಿವೃದ್ಧಿಗಾಗಿ ತಗಲಬಹುದಾದ ವೆಚ್ಚವನ್ನು ಇದರಲ್ಲಿ ಸೇರಿಸಿರುವುದಿಲ್ಲ. ಹೀಗೆ ನಾವು ಮೈಸೂರನ್ನು ವಿಸ್ತಾರವಾಗಿ ಮಾಡುವುದರಿಂದ ಇನ್ನೂ ಹೆಚ್ಚಿನ ಸಾಲವನ್ನು ಕೂಡ ಹೊರಬೇಕಾಗುತ್ತದೆ. ಅದರಿಂದ ಲಾಭ ಯಾವಾಗ ಬರುತ್ತದೋ ಏನೋ ! ಅದುವರೆಗೆ ನಮ್ಮ ಸ್ಥಿತಿ ಹೇಗಿರುತ್ತದೋ ದೇವರೇ ಬಲ್ಲ. ಆಡಳಿತಕ್ಕೆ ಸಂಬಂಧವಾಗಿ ಏನೇನು ಸಮಸ್ಯೆಗಳು ಉದ್ಭವವಾಗಬಹುದೋ ಗೊತ್ತಿಲ್ಲ. ಆದಾಯ ವೆಚ್ಚದ ಸಂಬಂಧವಾಗಿ ಇನ್ನೊಂದು ಮಾತು ಹೇಳಬೇಕಾಗಿದೆ. ಶ್ರೀಮಾನ್ ಕಂಠಿಯವರು ಅವರು ಬರೆದಂಥ ಲೇಖನದಲ್ಲಿ "ಎಷ್ಟೋ ಅಂಶಗಳನ್ನು ಬಿಟ್ಟು ಬಿಟ್ಟಿದ್ದಾರೆ. ಮತ್ತು ಎಷ್ಟು ಅಂಕಿ ಅಂಶಗಳು ಸಿಕ್ಕಿವೆಯೋ ಅಷ್ಟನ್ನೇ ಗಮನಕ್ಕೆ ತೆಗೆದುಕೊಂಡದ್ದರಿಂದ ಇಷ್ಟೊಂದು ಹೆಚ್ಚಿನ ರೀತಿಯಲ್ಲಿ ಖೋತಾ ಆಗಿದೆ" ಯೆಂದು ಹೇಳಿದರು. ಅವರು ಯಾವು ಯಾವುದನ್ನು ಬಿಟ್ಟಿದ್ದಾರೆ ಎಂಬುದನ್ನು ಹೇಳಿದ್ದಾರೆ. ಅವರು "Interest earnings, Contribution from railway lending of Police," ಅಂದರೆ ರೈಲ್ವೆಗೆ ಆಯಾಪ್ರಾಂತ ಸರಹದ್ದಿನಲ್ಲಿ ಕೊಟ್ಟರತಕ್ಕ ಪೋಲೀಸ್ ಸಿಬ್ಬಂದಿಯಿಂದ ಬರತಕ್ಕ ಹಣ, receipts in respect of superannuation, receipts in respect of Stationery and Printing, receipts on road transport, receipts from the Government of India from Community and Development Projects, receipts in respect of Grow More Food and other Agricultural schemes ಮತ್ತು Union Excise, ಇವನ್ನೆಲ್ಲಾ ಬಿಟ್ಟು ಬಿಟ್ಟಿದ್ದಾರೆ" ಎಂದು ಹೇಳಿದ್ದಾರೆ. ಆದರೆ ನಾವು ಈ ವರದಿಯನ್ನು ನೋಡಿ ಯಾವುದಾದರೂ ಈ ರೀತಿ ಬಿಟ್ಟು ಬಿಟ್ಟಿದ್ದಾರೆಯೇ ಎಂಬ ಆಲೋಚನೆ ಮಾಡೋಣ. ಆಯಾ ಡಿಸ್ಟ್ರಿಕ್ಟಿನ Administration ನಲ್ಲಿ ಯಾವ ಯಾವ ಬಾಬಿನಲ್ಲಿ ಏನೇನು ಉತ್ಪನ್ನ ಬರುತ್ತದೋ, ಯಾವ ಯಾವ ಬಾಬಿನಲ್ಲಿ ಏನೇನು ಖರ್ಚಾಗುತ್ತದೋ, ಅದನ್ನೆಲ್ಲಾ Accountant-General ಆಫೀಸಿನವರು ಡಿಸ್ಟ್ರಿಕ್ಟ್‌ವಾರು ವಿಂಗಡನೆ ಆಗಿರತಕ್ಕಂಥ ಅಂಕಿ ಅಂಶಗಳನ್ನು ಒದಗಿಸಿದ್ದಾರೆ. ಹಾಗಿದ್ದರೂ ಕೂಡ ಅಂಕಿ ಅಂಶಗಳನ್ನು ರಿಪೋರ್ಟಿನಲ್ಲಿ ಬಿಟ್ಟು ಬಿಟ್ಟಿದ್ದಾರೆ ಎಂದು ಹೇಳುವುದು ತದ್ವಿರುದ್ಧವಾಗುತ್ತದೆ. ಯಾವುದನ್ನೂ ಬಿಟ್ಟಿಲ್ಲ. ಆದಾಯದ ಹುಟ್ಟುವಳಿಯ ಅಂಕಿಗಳಲ್ಲಿ ವರಮಾನದ ತೆರಿಗೆಯ ಮತ್ತು ಸೆಂಟ್ರಲ್ ಎಕ್ಸೈಜು ಸುಂಕಗಳ ಹಣದ ಶೇಖರಣೆಯಿಂದ ಬಂದ ಭಾಗದ ಮೊಬಲಗೂ ಸೇರಿರುತ್ತದೆ. ರಾಜ್ಯ ಸರ್ಕಾರದ ಆದಾಯ ತೆರಿಗೆಯಲ್ಲಿ ಶೇಕಡ 80 ಭಾಗವನ್ನು ಜನಸಂಖ್ಯೆಯ ಆಧಾರದ ಮೇರೆಗೆ ಡಿಸ್ಟ್ರಿಕ್ಟುಗಳಿಗೆ ಹಂಚಲಾಗಿದೆ ಮತ್ತು ಉಳಿದ ಶೇಕಡ 20 ಭಾಗವನ್ನು ವಸೂಲಾಗುವ ಮೊಬಲಗಿಗೆ ಅನುಸಾರವಾಗಿ ಹಂಚಲಾಗಿದೆ. ಸೆಂಟ್ರಲ್ ಎಕ್ಸೈಜು ಮತ್ತು ಹೊಗೇಸೊಪ್ಪಿನ ತೆರಿಗೆಗಳನ್ನು ಜನಸಂಖ್ಯೆಯ ಆಧಾರದ ಮೇರೆಗೆ ಹಂಚಲಾಗಿದೆ.

ಪ್ರಾಮುಖ್ಯತೆಗನುಸಾರವಾಗಿ ಹುಟ್ಟುವಳಿಯ ಸಾಧನ ಸಂಪತ್ತುಗಳು ಯಾವುವೆಂದರೆ :—ಆದಾಯ

(ಶ್ರೀ ಕೆ. ಪುಟ್ಟಸ್ವಾಮಿ.)

ತೆರಿಗೆ, ಜಮೀನು ಕಂದಾಯ, ಇತರ ತೆರಿಗೆಗಳು ಮತ್ತು ಸುಂಕಗಳು, ಅರಣ್ಯಗಳು, ಸ್ಟ್ಯಾಂಪುಗಳು, ಮತ್ತು ವಿದ್ಯಾಭ್ಯಾಸ; ಉತ್ತರ ಕನ್ನಡದಲ್ಲಿ, ಆ ಡಿಸ್ಟ್ರಿಕ್ಟ್‌ನ ಒಟ್ಟು ಹುಟ್ಟುವಳಿಯಲ್ಲಿ ಸುಮಾರು ಶೇಕಡ 75 ಭಾಗವು ಅರಣ್ಯಗಳಿಂದ ಬಂದ ಹುಟ್ಟುವಳಿಯೇ ಆಗಿದೆ.

ಈಗ ವೆಚ್ಚದ ಅಂಕಿ ಅಂಶಗಳ ಕಡೆಗೆ ಗಮನ ಕೊಡುವುದಾದರೆ, ರಾಷ್ಟ್ರಾಭಿವೃದ್ಧಿ ಕಾರ್ಯಗಳು ಮತ್ತು ಸಾಮಾಜಿಕ ಕೆಲಸ ಕಾರ್ಯಗಳ ಸಂಬಂಧದಲ್ಲಿ ವಿದ್ಯಾಭ್ಯಾಸವು ಪ್ರಥಮಸ್ಥಾನವನ್ನು ಪಡೆಯುತ್ತಿದೆ. ಮತ್ತು ವಿದ್ಯಾಭ್ಯಾಸಕ್ಕಾಗಿ ಒಟ್ಟು ವೆಚ್ಚದಲ್ಲಿ ಸುಮಾರು ಶೇಕಡ 33 ಭಾಗವನ್ನು ಖರ್ಚುಮಾಡಲಾಗಿದೆಯೆಂದು ನಮಗೆ ತಿಳಿದು ಬರುತ್ತದೆ. ಒಟ್ಟು ವೆಚ್ಚದಲ್ಲಿ ವೈದ್ಯ ಸಹಾಯ, ಜನಾರೋಗ್ಯ ರಕ್ಷಣೆಯ ಇಲಾಖೆಗಳ ಸಂಬಂಧದಲ್ಲಿ ಸುಮಾರು ಶೇಕಡ 7 ಭಾಗವನ್ನು, ವ್ಯವಸಾಯ, ಪಶುಪಾಲನೆ, ಮತ್ತು ಪರಸ್ಪರ ಸಹಕಾರದ ಸಂಬಂಧದಲ್ಲಿ ಸುಮಾರು ಶೇಕಡ 12 ಭಾಗವನ್ನು ಮತ್ತು ಕೈಗಾರಿಕೆಗಳ ಸಂಬಂಧದಲ್ಲಿ ಸುಮಾರು ಶೇಕಡ ಒಂದು ಭಾಗವನ್ನು ಖರ್ಚುಮಾಡಲಾಗಿದೆ. ಈ ಆಡಳಿತ ಸಂಬಂಧದಲ್ಲಿ ಏನೇನು ಸಮಸ್ಯೆ ಉತ್ಪನ್ನವಾಗುತ್ತದೆ ಎಂಬುದನ್ನು ಹೇಳಿದ್ದಾರೆ. ಈ ಆಡಳಿತ ಸಮಸ್ಯೆಯನ್ನು ನಾವು ಪರಿಶೀಲನೆ ಮಾಡುವ ಪೂರ್ವಭಾವಿಯಾಗಿ ನಮ್ಮ ದೇಶದಲ್ಲಿ ನಮ್ಮ ನೌಕರರಿಗೆ ಕೊಡತಕ್ಕಂಥ ಸಂಬಳ ಸಾರಿಗೆಗಳನ್ನು ನಾವು ಪರ್ಯಾಲೋಚನೆ ಮಾಡೋಣ. ಈಗಾಗಲೇ ನಾವು ಕೊಡುತ್ತಾ ಇರತಕ್ಕಂಥ ಸಂಬಳ ಸಾರಿಗೆಗಳು 8 ಕೋಟಿಗೆ ಮೀರಿದೆ. ಇದನ್ನೇ ನಮಗೆ ಕೊಡುವುದಕ್ಕೆ ಸಾಧ್ಯವಿಲ್ಲ; ಸಿಬ್ಬಂದಿಯನ್ನು ಕಡಿಮೆ ಮಾಡಬೇಕು ಎನ್ನುವವಾದವನ್ನು ಕೂಡ ನಾವು ಕೇಳುತ್ತಿದ್ದೇವೆ. ಅದಕ್ಕೆ ಸರಿಯಾಗಿ ಆಡಳಿತ ದೃಷ್ಟಿಯಿಂದ ಈಗ ಇರತಕ್ಕಂಥ ಸಿಬ್ಬಂದಿ ಸಾಲದು. ಎಲ್ಲರಮೇಲೂ ಕೆಲಸದ ಹೊರೆ ಹೆಚ್ಚಾಗಿದೆ. ಕಾರ್ಯ ಚಟುವಟಿಕೆಗಳು ವಿಸ್ತಾರವಾಗಿ ಆಗಿವೆ. ದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ಬಹಳವಾಗಿ ನಡೆಯುತಿವೆ. ಈ ಕೆಲಸಕಾರ್ಯಗಳನ್ನೆಲ್ಲಾ ನಿರ್ವಹಿಸಬೇಕಾದರೆ ಈಗ ಇರತಕ್ಕಂಥ ಸಿಬ್ಬಂದಿ ಸಾಲದು ಎಂದು ಮತ್ತೊಂದುವಾದವನ್ನು ಕೇಳುತ್ತಿದ್ದೇವೆ. ನನ್ನ ಅಭಿಪ್ರಾಯದಲ್ಲಿಯೂ ಕೂಡ, ಸಿಬ್ಬಂದಿ ಹೆಚ್ಚಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಹೆಚ್ಚಾಗಿಲ್ಲ ಎಂದು ನನ್ನ ಭಾವನೆ. ಇಲಾಖೆಗಳಲ್ಲಿ ಇರತಕ್ಕಂಥ ಕೆಲಸದ ಹೊರೆ ಹೆಚ್ಚು ಕಡಿಮೆ ಇರಬಹುದು. ಬಹುಶಃ ಈ ವಿಚಾರವನ್ನು ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಕೆಲಸವನ್ನು ಎಲ್ಲರಮೇಲೂ ಇರುವ ಹಾಗೆ ಹಂಚಬೇಕಾಗುತ್ತದೇ ವಿನಾ ಇಂತಹ ಒಂದು ಇಲಾಖೆಯಲ್ಲಿ ಹೆಚ್ಚು ನೌಕರರು ಇದ್ದಾರೆ. ಅವರನ್ನು ತೆಗೆಯಬಹುದು ಎನ್ನುವ ವಿಚಾರವಿಲ್ಲ. ಇಂತಹ ಪರಿಸ್ಥಿತಿ ಜೊತೆಗೆ ಕೊಡುತ್ತಾ ಇರುವ ಸಂಬಳ ಸಾರಿಗೆ ಕೂಡ ನಾವು ಪರಿಶೀಲನೆ ಮಾಡಬೇಕು. ಮೈಸೂರು ದೇಶದಲ್ಲಿ ಕೊಡುತ್ತಾ ಇರತಕ್ಕಂಥ ಸಂಬಳ ಸಾರಿಗೆಗಳನ್ನು ಬೇರೆ ಯಾವ ಪ್ರಾಂತಕ್ಕೇ ಹೋಲಿಸಿದರೂ ಕೂಡ ಕನಿಷ್ಠ. ಆದರೆ ನಮ್ಮ ಸರ್ಕಾರೀ ನೌಕರರು ಮಾಡುತ್ತಾ ಇರತಕ್ಕಂಥ ಕೆಲಸ ಯಾವ ರೀತಿಯಿಂದಲೂ ಕೂಡ ಬೇರೆಯವರಿಗಿಂತ ಕನಿಷ್ಠ ದರ್ಜೆಯದಲ್ಲ.

2 P.M.

What are the supports that we have got here? It is not merely the territorial distribution or the differences that we have to take seriously. But there are other supports such as the spiritual, the cultural and other higher things. The Report does not contain anything about other factors. If deals with merely physical factors. Even in the terms of reference, they have asked only about physical aspects, about communications, economic side, about schools, medical things and co-operatives and some finance. Have they risen above that? Were they asked to rise above these considerations? When we have got to get a marriage done, it is not merely the question of how much money the man has, or the woman has. They are equal in the eye of law now. It is not on the basis of money or colour that marriage between a man and a woman is decided. It is on the basis of friendship, of affection and mutual understanding. This Report contains some facts and some figures. But I submit that they are not the full facts and figures. I am sure the Committee will themselves accept that they are not complete and infallible. We have to see something above the facts and figures that are contained in this Peport. If we take these higher considerations, I am sure there won't be any difference between us. We will give unanimous support to this idea of unity of all people into one State. There is the other support also. Men of vision, who have thought of the motherland in the proper context of things as one mother to the whole of India and the whole of Karnataka as a daughter of that great mother, have all conceived that Karnataka is the mother of all those people who speak one language.

Wherever we go, outside Mysore, people speaking Kannada come together to invite the visitors from Mysore, to talk to them, and to address them. I have got very vivid and pleasant memories of several places I visited in America. I found a few Kannada-speaking people coming from the Kannada-speaking areas of our State getting together and vying with each other to honour the visitor and asking when the Karnataka State was going to be formed. In London you should see our friends. Sri Siddaveerappa, the Home Minister was also there when I went in recent times. There is what is called a Kannada *Coota.* I did not know there were so many Kannada people in London—as many as 60 people. They gathered together. They spoke Kannada. It was a luxury for them. Every one was eager to see that a Kannada speaking province was formed. That is beyond the shores of India. But go to Bombay. There is one opinion in regard to this matter. There is no difference of opinion at all everywhere except in the Mysore State. went to Bombay, Cawnpur, Patna, and Calcutta, Jamshedpur and Delhi. These are places far off. Go to Madras. Mysoreans and people of Karnataka who reside outside Mysore have only one opinion in regard to the formation of the State.

4 P.M.

They are all agreed that one State should be formed and they must all be united. They have got the support of all the Kannadigas outside Mysore and all the Kannadigas enjoy the idea of belonging to one State as children of Karnatak Matha. Not only the people of Karnataka rejoice over this idea, but also the great poet like Kuvempu. He expresses a great idea. He is not merely a human being, he is a messenger of the Mother Country, of the State, of that language and that idea. We may not all be able to rise to his level and appreciate the significance of his views. But yet we have to see what a great man he is and how he loves to see that one State must be formed out of all these

(SRI T. SIDDALINGAIYA)

people for the advancement of moral, spiritual, mental and economic development of the very people themselves. He sees a vision, he sees the vision of the country being bound up with the language that we speak. And I need not mention the names of many other people who have favoured this idea. Every poet has this vision; has this longing that there should be one Kannada State; every philosopher has expressed it; nobody has said there should be two States. Wherever I have gone, I have felt that the idea was that one State must be formed. In my own State, I must say, Sir, with great apology, we consider that we are all very happy. In Mysore we are enjoying all the blessings of nature; thers is none to compare with us, that is the feeling. I am sorry, we are not in a great paradise. People who have gone outside Mysore are getting on very well. They tell us that the standard of living is higher than in Mysore, their earning capacity is greater than in Mysore, there is more private enterprise than in Mysore.

(*A Member:* Still they are not happy.)

No one so far has come forward with a complaint that he has felt unhappy there. Everyone is getting on very well. You can produce any amount of evidence to show, that those people outside the Mysore State have expressed the opinion—why, many of us on the floor of this House have expressed the idea—that our people are very poor and the taxation is heavy and our State is poorer than other States. Even in regard to Agricultural Income Tax Bill, some Hon'ble Members stated, that we are not capable of taking more burden; we are poorer than other States. I do not want to enter into any controversy, as I submitted already, I want you only to take the spirit of what I say. Let us try to come together. Therefore, I submit, all over the country people who are Kannada speaking, wherever they are, give their best blessings to the formation of a Karnatak State. Therefore I want to submit that we need not think that we are in a better position in every way than others. We will certainly improve by making a bigger State and working on greater magnitudes. As I stated earlier, we should all try, we must all try to move out and see the spirit of the Kannada people who are outside. Then we will certainly be inspired by this idea and we will never say that we are holding different opinions on this very important matter.

Sir, it is for the future generation to come to judgment as to what we have done today; whether we have done a right thing or not. And what we do today must be to our credit and for all times. Our future generation must enjoy the great amenities of the step that we are taking today. There are many objections also raised, I am just trying to answer some of them. It was suggested by somebody that two Kannadiga States might be formed.

MEMBERS.—Nobody has said.

Sri T. SIDDALINGAIYA.—However, it may arise in the course of discussion today or tomorrow. I will just answer in anticipation. If there are two States, certainly it becomes very costly; one other Government, one more Cabinet, one more Public Service Commission, one more High Court, one more Head of Department for each Department, one more Secretariat, you can see how the expenses of the administration will be doubled. Further, we have got also to see how many more buildings they have to build. Secondly, there are other objections—the distances from the centre of the State. Bangalore being accepted as the Capital of Mysore State or rather expanded Mysore State, the distance will be 300 or 400 miles. I believe, today the distances are altogether expunged. The world's space has shrunk, travel has become so easy. Therefore in this age, I believe, there will not be any serious handicap even if the longest part or longest link of the State is 200 or 300 miles away from the centre. Ranibennur in Bombay State is something like 550 miles away from Bombay. Even otherwise, communications have become so handy that we need not make much of it.

We have not merely to consider the aspects of facts and figures as are

given in the Report, but also the other aspects. Sir, much reference was made by some of my friends to Sri Kanti's statement. To my mind, it looks as if it is also a good supplement to the Report. There are some additional facts and figures given. We may not take all of them as final and infallible but let us take them as the basis for consideration. I think nobody should have any objection to consider Sri Kanti's statement. If we want to pick up certain figures from anywhere, we could pick them up and argue. But let us not emphasise some of these small loop-holes, lacuna that may be found in any Report. We are full of faults; the lesser our faults, the greater we are. Nobody is free from faults, no Report is free from faults. From the point of our own national interest and universal human nature we will consider these things and arrive at some unanimous understanding.

There is one more serious fact which I submit, we need not think only on the one side of the aspect. There are so many loop-holes, so many defects in the Non-Mysore Kannadiga area. There are many troubles, many handicaps, I agree; but we must see that there are some advantages also. For instance, in Mysore everybody has admitted, it is on records, the per capita of land is only ·9 acre and in Karnataka it is 1·6. Then with regard to forest, on the principle of the extent of forest areas in any country, Mysore has already come down to 18 per cent. We have to realize that with those districts like Karwar that is North Canara, South Canara, Coorg added to us, immediately our per capita land area will increase and also forest area will increase. Bombay State is suffering under a very great handicap. If these two districts of Karwar and Belgaum are taken away from Bombay,—even as it is, the forest area in the Bombay State is lower than the minimum fixed it will be still further reduced. These are not important, but still, I think substantially considerable for the purpose of estimating the economic side of formation of a State. Secondly, Sir, I am told,—this is also on record in the Seshadri Committee Report itself—the District of Karwar is 75 per cent forest district and the income of that district also is 75 per cent from the forest. We can see that there is a great advantage in taking those things and exploiting them. In Mysore, the area is getting reduced. Therefore, the addition of these districts will certainly be of great advantage to us. Thirdly, Sir, literacy, it is admitted, is higher than in Mysore; school-going population is higher than in Mysore. Of course, Sir, I should submit that Hyderabad is one unfortunate exception. I must say that these unfortunate children must also be taken care of by us. Today, the Central Government is not looking after this area or that area but they are seeing that the entire area has to be developed. The Centre is treating the whole country as one State and it wants to develop every community and every area in the country. Therefore, I submit that with regard to Hyderabad we can have some points for mentioning that it is not advantageous to us. As Indians, we have to take the responsibility of Hyderabad also with sympathy. Whatever may be in the Report, if Hyderabad comes, it is also our baby, and we have to hold that baby. We cannot altogether give up our responsibility because we are all members of one family of our Mother Land.

Mr. SPEAKER.—Your time is up.

Sri T. SIDDALINGAIYA.—I will finish at any time that the Speaker may fix. I submit that the cattle population is higher there and not only the population but the sturdiness of those cattle is much better than here. The people also are hard working. The only difference which any of us might find is, they look apparently a little unpolished, but they are as genuine as ourselves, more genuine than ourselves I say that with personal experience. They are more loving, more hospitable. I don't want to use any superlative language.

Sri K. PUTTASWAMY.—I don't concede for a moment that we are less hospitable than any.

Sri T. SIDDALINGAIYA.—I don't say that we are less.

Sri K. PUTTASWAMY.—I may tell the Hon'ble Member that the point is that we are more hospitable than others.

Sri T. SIDDALINGAIYA.—These are very small differences of opinon, I concede. After all, all minds are not alike. There is plenty of room for difference of opinion, but I think these are not very important.

Then, the co-operative system is better than here. We also see that the Sarvodaya Centres that have been started have been working very well and the life has become very brisk even in Hyderabad after its coming under the Central Government. Also there is as such aluminium found in those districts, nowhere else in the east. That is a very great asset in the whole of our country and we could bring the redown here and manufacture aluminium. Then we have got full prohibition there going on very successfully and Mysore also could easily introduce and expand prohibition. We have got there so many projects I need not mention. More than all those things, I submit the Karnataka State will become the best and completely self-contained State. We need not look for anything outside the Karnataka State. I say the viewpoint must be a little sympathetic. As one country we have to get on, and, on the basis of mutual interests, the States are to be organized. Life is very important. We represent a very great force in our country to-day and India is the leader of the world and inside India we have to make ourselves as progressive and prosperous as we can Therefore, I submit that, without difference of any opinion, on all these points we can agree and give a unanimous support to this idea of the formation of a Kannada State. I don't want to prolong my speech. It was no intention of mine to hurt the feelings of anybody. I am prepared even personally to explain if there are any differences. But I appeal to the heart of every brother here to consider these things more sympathetically. Some day we have to become one. It is no good making much of only the differences and we should see what our common point is and how we can be united for the greater prosperity of every one. Thank you, Sir.

ಶ್ರೀ ಕೆ. ಪಟ್ಟಾಭಿರಾಮಯ್ (ಕೋಲಾರ).—ಮಾನ್ಯ ಸಭಾಪತಿಗಳೇ, ಈಗ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಒಂದು ನಿರ್ಣಯ ಸಂಬಂಧವಾದಂಥ ಒಂದು ಅಂಕಿ ಅಂಶಗಳ ಸಮಿತಿಯ ವರದಿಯ ಬಗ್ಗೆ ನಾವೀಗ ಚರ್ಚೆಮಾಡುತ್ತಿದ್ದೇವೆ. ಸರ್ಕಾರದವರು ನಮ್ಮ ಮುಂದೆ ಈ ವರದಿಯನ್ನು ಈ ರೂಪದಲ್ಲಿಡದೆ ಇದ್ದಿದ್ದರೆ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಇಷ್ಟೊಂದು ರೂಪಾಂತರ ಹೊಂದಿದ, ಇಷ್ಟೊಂದು ವಿಶಾಲ ಭಾವನೆಯಿಂದ ಮನಸ್ಸನ್ನು ಬಿಚ್ಚಿ ತಮ್ಮ ಹೃದಯಾಂತರಾಳದಿಂದ, ಕೂಡಿದ, ಅದು ಏನೇ ಇರಲಿ ಅದು ಒಳ್ಳೆಯದೇ ಆಗಲಿ ಅಥವಾ ಕೆಟ್ಟದ್ದೇ ಆಗಲಿ, ಅಭಿಪ್ರಾಯಗಳನ್ನೆಲ್ಲಾ ಹೊರಗೆ ಹಾಕುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಈಗ ಮಾನ್ಯ ಸದಸ್ಯರುಗಳು ಇಂಥ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಈ ವಿಚಾರವನ್ನು ಆಳವಾಗಿ ವಿಮರ್ಶೆಮಾಡಿ ಮಾತನಾಡತಕ್ಕದ್ದು ಆವಶ್ಯಕ. ಆದರೆ ಇದೇ ಸಂದರ್ಭದಲ್ಲಿ ನನ್ನ ಮನಸ್ಸಿಗೆ ಒಂದು ವ್ಯಥೆ ಕೂಡ ಉಂಟಾಗಿದೆ. ಅದೇನೆಂದರೆ ಈ ವಿಚಾರ ಈ ಮಾನ್ಯ ಸಭೆಯ ಮುಂದೆ ಚರ್ಚೆಯಾಗುತ್ತಿರುವಾಗ ಅದೇ ಸಂದರ್ಭದಲ್ಲಿ ಆಗಾಗ್ಗೆ ಅಲ್ಲಲ್ಲೇ ಸ್ವಲ್ಪ ಏನೋ ಮನಸ್ಸಿಗೆ ಒಂದು ಜಿಗುಪ್ಸೆ ಉಂಟಾಗುವ ದಕ್ಕೆ ಅಥವಾ ಒಂದು ಜಿಜ್ಞಾಸೆ ಉದ್ಭವಿಸುವ ಹಾಗೆ ಅವಕಾಶ ಕೊಟ್ಟಂತೆ ಭಾಸವಾಗುತ್ತಿತ್ತು. ಆದರೆ ಅಂಥ ಜಿಜ್ಞಾಸೆಗಳಿಗೆ ಮತ್ತು ಜಿಗುಪ್ಸೆಗಳಿಗೆ ಅವಕಾಶ ವಿಲ್ಲದಂತೆ ಇದು ನಡೆದಿದ್ದರೆ ಚೆನ್ನಾಗಿರುತ್ತೇನೋ ಎಂದೆನ್ನಿಸುತ್ತಿದೆ. ಆದರೆ ಇಂಥ ಒಂದು ಮಹತ್ವ ಪೂರಿತವಾದ ವಿಚಾರವನ್ನು ಚರ್ಚೆಮಾಡುವಂಥ ಕಾಲದಲ್ಲಿ ಸ್ವಲ್ಪ ಜಿಜ್ಞಾಸೆಗಳು ಬರತಕ್ಕದ್ದೂ ಸ್ವಾಸ್ಥ್ಯವೇ. ಅದಕ್ಕಾಗಿ ನಾವುಗಳು ಯಾರೂ ವ್ಯಸನಪಡಬೇಕಾಗಿಲ್ಲ. ಈಗ ನಮ್ಮ ಮುಂದೆ ಬಂದಿರತಕ್ಕಂಥ ಈ ಮಹತ್ವಪೂರಿತವಾದಂಥ ವಿಚಾರದ ಬಗ್ಗೆ ನಾನೀಗ ನಾಲ್ಕು ಮಾತುಗಳನ್ನು ಆಡಬೇಕೆಂದಿದ್ದೇನೆ. ಆದರೆ ಈ ಹಿಂದೆಯೇ ಈ ಸಂಬಂಧವಾಗಿ ನನ್ನ ಆ ಒಂದು ನಿಲುವು ಏನಿದೆಯೋ ಅದನ್ನಾಗಲೇ ಆ ಆಂಧ್ರ ಪ್ರಾಂತ್ಯ ನಿರ್ಮಾಣದ ಮಸೂದೆ ಈ ಸಭೆಯ ಮುಂದೆ ಚರ್ಚೆಗೆ ಬಂದಿದ್ದಾಗಲೇ ಸ್ಪಷ್ಟವಾಗಿ ತಿಳಿಸಿಬಿಟ್ಟಿದ್ದೇನೆ. ಅದನ್ನು ನಾನು ಲವಲೇಶವೂ ಮಾರ್ಪಾಡುಮಾಡಿಲ್ಲ. ಹಾಗೆ ಮಾರ್ಪಾಡನ್ನು ಮಾಡತಕ್ಕ ಅವಕಾಶವೂ ಇಲ್ಲ. ನಾನು ಈ ವಿಚಾರದಲ್ಲಿ ಮಾತನಾಡುವ ಮುನ್ನ ಪ್ರಾಸಂಗಿಕವಾಗಿ ಇದರ ಹಿನ್ನೆಲೆಯೇನಿದೆಯೋ ಅದರ ಬಗ್ಗೆ ಒಂದೆರಡು ವಿಚಾರಗಳನ್ನು ನಾನೀಗ ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ಆಶಿಸಿದ್ದೇನೆ.

ಈ ಹಿಂದೆ ನಾನು ಆ ಆಂಧ್ರ ಮಸೂದೆಯ ಸಂಬಂಧವಾಗಿ ಮಾತನಾಡುವಾಗ ಈ 1799ನೆಯ ಇಸವಿಯ ಮಹತ್ವದ ವಿಚಾರವಾಗಿ ಆ ವರ್ಷವನ್ನು ಒಂದು ದೃಷ್ಟಿಯಿಂದ ಆಗ ವಿಮರ್ಶೆ ಮಾಡಿದ್ದೆನು. ಈಗ ಆ ವರ್ಷವನ್ನು ನಾನು ಇನ್ನೊಂದು ದೃಷ್ಟಿಯಿಂದ ವಿಮರ್ಶೆಮಾಡಬೇಕಾಗಿದೆ. 1799 ರಲ್ಲಿ ಶ್ರೀರಂಗಪಟ್ಟಣವು ಪತನವಾದಮೇಲೆ, ಮೂರನೆಯ ಮೈಸೂರಿನ ಯುದ್ಧಾನಂತರ, ಟಿಪ್ಪೂಸುಲ್ತಾನನ ಮರಣವಾದ ನಂತರ ಏನೊಂದು ಮಹಾ ಸನ್ನಿವೇಶ ಆಗ ಸಂಭವಿಸಿತ್ತೋ ಅದಕ್ಕಿಂತಲೂ ಹಿಂದಕ್ಕೆ ತಮ್ಮೆಲ್ಲರ ಗಮನವನ್ನು ಸೆಳೆದುಕೊಂಡುಹೋದರೆ ನನ್ನ ಅಭಿಪ್ರಾಯದಲ್ಲಿ ಅಂದಿದ್ದಂಥ ಮೈಸೂರು ಸಂಸ್ಥಾನದ ಹಿರಿಮೆಯ ಬಗ್ಗೆ ನಾವೆಲ್ಲರೂ ಒಂದು ಹೆಮ್ಮೆಪಟ್ಟು

ಕೊಳ್ಳುವಂಥ ಒಂದು ಮಹಾ ಸನ್ನಿವೇಶವೇನಿತ್ತೋ ಅಂಥ ಒಂದು ಸನ್ನಿವೇಶದ ಬಗ್ಗೆ, ನಾವೀಗ ನಮ್ಮ ಅಭಿಪ್ರಾಯಗಳನ್ನು ಹೊರಗೆಡುವಂಥ ಒಂದು ಚರ್ಚೆಯಲ್ಲಿ ಈ ಒಂದೆರಡು ದಿವಸಗಳಿಂದಲೂ ಭಾಗಿಗಳಾಗಿರುತ್ತೇವೆ. ಆ 1799 ನೆಯ ವರ್ಷ ಏನಿತ್ತೋ ಆಗ ಆಡಳಿತವನ್ನು ಆಕ್ರಮಣಮಾಡಿದಂಥ ಬ್ರಿಟಿಷರು ಆಗಿದ್ದಂಥ ಮೈಸೂರನ್ನು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ತುಂಡುಮಾಡಿ ಇದರ ರೆಕ್ಕೆ-ಪುಕ್ಕಗಳನ್ನು ಕಿತ್ತು ಹಾಕಿ ಕಾಲು ಮುರಿದ ಪಕ್ಷಿಯಂತೆ ಮಾಡದೆ ಆ 1799ಕ್ಕೆ ಹಿಂದೆ ಯಾವ ಒಂದು ಮೈಸೂರು ಸಂಸ್ಥಾನ ಎಂದು ಇತ್ತೋ ಅದನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದರೆ ಬಹುಶಃ ಈ ದಿವಸ ನಮ್ಮ ಸಭೆಯ ಮುಂದೆ ಇಂಥ ಒಂದು ವಿಚಾರ ಚರ್ಚೆಗೆ ಬರಲು ಅವಕಾಶವೇ ಇರುತ್ತಿರಲಿಲ್ಲವೆಂದು ಹೇಳುತ್ತೇನೆ. ಆ ಒಂದು ದೃಷ್ಟಿಯಿಂದ ಆಗಿದ್ದಂಥ ಮೈಸೂರು ಬಹಳ ಕಳೆಯಿಂದ ಕೂಡಿದ್ದಾಗಿತ್ತು. ಆದರೆ ಆಗ ದೇಶವನ್ನು ಗೆದ್ದುಕೊಂಡಂಥ ಬ್ರಿಟಿಷರು ಅವರ ಆಡಳಿತ ಇಲ್ಲಿ ಬಹಳ ಕಾಲವಿರಬೇಕಾಗಿದ್ದರೆ ಅದಕ್ಕೆ ಅನೇಕ ಅಡ್ಡಿ ಅಡಚಣೆಗಳು ಇಲ್ಲಿನ ಜನಗಳಿಂದ ಉಂಟಾಗಬಹುದು ಎಂಬ ಉದ್ದೇಶದಿಂದಲೂ ಮತ್ತು ಈ ದಕ್ಷಿಣ ಇಂಡಿಯದಲ್ಲಿರತಕ್ಕಂಥ ಜನರ ಶಕ್ತಿ ಸಾಮರ್ಥ್ಯಗಳೆಲ್ಲಾ ಒಂದುಗೂಡಿದರೆ ಅಥವಾ ರೂಪಾಂತರ ಹೊಂದಿದರೆ ಅವರ ಆಡಳಿತ ಕೆಲವೇ ದಿನಗಳಲ್ಲಿ ಮುಕ್ತಾಯವಾಗಬಹುದೆಂಬ ಒಂದು ಹೆದರಿಕೆಯಿಂದಲೂ ಅವರು ದೇಶಗಳನ್ನೆಲ್ಲಾ ತುಂಡು ತುಂಡಾಗಿ ಕತ್ತರಿಸಿ ಅವರಿಗೆ ಆಳಲು ಅನುಕೂಲವಾಗುವಂತೆ ಆಗಿದ್ದಂಥ ವಿಶಾಲ ಮೈಸೂರನ್ನು ಅಂದರೆ ಕಾವೇರಿಯಿಂದ ಹಿಡಿದು ಗೋದಾವರಿ ನದಿಯವರಿಗೂ ವಿಸ್ತರಿಸಲ್ಪಟ್ಟಿದ್ದಂಥ ಈ ವಿಶಾಲ ಮೈಸೂರನ್ನು ತುಂಡುತುಂಡಾಗಿ ಕತ್ತರಿಸಿ ಬೇರೆ ಬೇರೆಯವರ ಆಡಳಿತಗಳಿಗೆ ಒಳಪಡಿಸಿದರು. ಈ ಮೈಸೂರಿಗೆ ಯಾವ ಒಂದು ಸಮುದ್ರ ತೀರವೂ ಇರಬಾರದು, ಇದರ ಆರ್ಥಿಕ ಮತ್ತು ಸಾಮಾಜಿಕ ಶಕ್ತಿದಾಯಕ ದೃಷ್ಟಿಯಿಂದ ಆಗ ಅಂತರ್ಗತವಾಗಿದ್ದಂಥ ಮೈಸೂರನ್ನು ಕೆಲವು ರಾಜಕೀಯ ಕಾರಣಗಳ ಮೇಲೂ ಹರಿದು ಹಂಚಿಬಿಟ್ಟರು. ಆಗ ನಮ್ಮ ಈಗ ಸ್ವಲ್ಪ ದಿನಗಳಿಗೆ ಹಿಂದೆ ಇದ್ದಂಥ 9 ಜಿಲ್ಲೆಗಳನ್ನು ಮಾತ್ರ ಮೈಸೂರಿಗೆ ಉಳಿಸಿಕೊಟ್ಟರು. ಆದರೆ ಹೀಗಾದುದಕ್ಕೆ ನಾವುಗಳು ಯಾರೂ ಕಾರಣರಲ್ಲ. ಅದಕ್ಕಾಗಿಯೇ ಈಗ ನಾವು ಈ ಪ್ರಶ್ನೆಯನ್ನು ಸ್ವಲ್ಪ ವಿಶಾಲದೃಷ್ಟಿಯಿಂದ ನೋಡಬೇಕೆಂದು ಹೇಳುತ್ತಿರುವುದು. 1799ರಲ್ಲಿ ಆಗಿದ್ದಂಥ ವಿಶಾಲ ಮೈಸೂರನ್ನು ಮೂರು ನಾಲ್ಕು ತುಂಡುಗಳಾಗಿ ಕತ್ತರಿಸಿ ಅದರಲ್ಲಿ ಒಂದು ಭಾಗವನ್ನು ಈಗಿರತಕ್ಕಂಥ ಬೊಂಬಾಯಿ ಪ್ರಾಂತ್ಯಕ್ಕೂ ಮತ್ತೊಂದು ಭಾಗವನ್ನು ಮದ್ರಾಸ್ ಪ್ರಾಂತ್ಯಕ್ಕೂ, ಇನ್ನೊಂದು ಭಾಗವನ್ನು ಹೈದರಾಬಾದ್ ನೈಜಾಮರಿಗೂ ಕೊಟ್ಟುಬಿಟ್ಟರು. ಉಳಿದ ಇನ್ನು ಕೆಲಕೆಲವು ಭಾಗಗಳನ್ನು ಮರಾಠೆಯವರಿಗೆ ಹಂಚಿಬಿಟ್ಟರು. ಹೀಗೆ ಯಾವುದೋ ಒಂದು ಉದ್ದೇಶಕ್ಕಾಗಿ ಏನೋ ಒಂದು ಕಾರಣದಿಂದ ಹಿಂದೆ ಇದ್ದ ಈ ವಿಶಾಲ ಮೈಸೂರು ತನ್ನ ಒಂದು ಅಸ್ತಿತ್ವವನ್ನು ಕಳೆದುಕೊಂಡಿತು. ಇದಕ್ಕಾಗಿ ನಾನು ತುಂಬ ವ್ಯಾಕುಲಪಡುತ್ತಾ ಈಗ ಅದನ್ನು ಮತ್ತೆ ಒಂದುಕೂಡಿಸತಕ್ಕ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಪೇಕ್ಷಿಸುತ್ತೇನೆ. ಆ 1799 ನೆಯ ವರ್ಷದ ಇನ್ನೊಂದು ಅಂಶವನ್ನೂ ಸಹ ನಾವೀಗ ಗಮನಿಸಬೇಕಾಗಿದೆ. ಆ ಹಿಂದೆ ಅಂದರೆ 1799ರ ಹಿಂದೆ ಈ ವಿಶಾಲ ಮೈಸೂರು ರಾಜ್ಯವು ಒಡೆಯರ ಮನೆತನಕ್ಕೆ ಸೇರಿತ್ತು. ಆದರೆ 1799ರ ನಂತರ ಅವರು ಈ ರಾಜ್ಯವನ್ನು ಕಳೆದುಕೊಂಡ ಹಾಗಾಗಿತ್ತು. ಆದಾಗ್ಗೂ ಪುನಃ ಏನೋ ಒಂದು ದೃಷ್ಟಿಯಿಂದ ಆ ಬ್ರಿಟಿಷರು ಪುನಃ ಈ ಒಡೆಯರ ಮನೆತನದವರನ್ನೇ ತಂದು ಅವರಿಗೆ ಈ ರಾಜ್ಯವನ್ನು ಬಿಟ್ಟುಕೊಟ್ಟದ್ದರಿಂದ ಪುನಃ ಈ ಮೈಸೂರು ರಾಜ್ಯ ನಿರ್ಮಾಣವಾಗಲು ಒಂದು ಅವಕಾಶವಾಯಿತು. ಆದರೆ ಹಿಂದೆ ಇದ್ದಂಥ ಮೈಸೂರನ್ನು ಹರಿದು ಬೊಂಬಾಯಿ—ಮದ್ರಾಸ್—ಹೈದರಾಬಾದುಗಳಿಗೆ ಹಂಚಿಕೆ ಮಾಡದೆ ಹೋಗಿದ್ದರೆ ಈಗ ಈ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ, ಮತ್ತು ನಮ್ಮಲ್ಲಿ ಈ ದಿವಸ ಇಂಥ ಜಿಜ್ಞಾಸೆಗಳೂ ಹುಟ್ಟುವುದಕ್ಕೆ ಅವಕಾಶವಿರಲಿಲ್ಲವೆಂದು ಹೇಳುತ್ತೇನೆ. ಈಗ ನಾವು ಈ ವಿಚಾರವನ್ನು ಹೀಗೆಯೇ ಒಂದೊಂದನ್ನಾಗಿ ತೆಗೆದುಕೊಂಡು ವಿಮರ್ಶೆಮಾಡುತ್ತಾ ಹೋದರೆ ಇದು ಒಂದೊಂದು ದೃಷ್ಟಿಯಲ್ಲೂ ಬಹಳ ಪ್ರಾಮುಖ್ಯವಾದಂಥ ವಿಚಾರ ಎನ್ನುವುದು ಗೊತ್ತಾಗುತ್ತದೆ. ಆದರೆ ನಾವೀಗ ಆ 1799ರ ಘಟನೆಯನ್ನು ಬಿಟ್ಟುಬಿಟ್ಟರೆ ಇತ್ತೀಚೆಗೆ ನಡೆದಿರತಕ್ಕಂಥ ಇನ್ನೂ ಕೆಲವು ಘಟನೆಗಳು ನಮ್ಮ ಕಣ್ಣುಮುಂದೆ ನಡೆದಿರುವಂಥವುಗಳಾಗಿರುತ್ತವೆ. ವಲ್ಲಭಾಯಿಪಟೇಲ್‌ರವರು ದೇಶಕ್ಕೆ ಸ್ವಾತಂತ್ರ್ಯ ಬಂದ ತರುವಾಯ ಕೇಂದ್ರ ಮಂತ್ರಿಮಂಡಲದಲ್ಲಿ ಸೇರಿ ಅಧಿಕಾರಕ್ಕೆ ಬಂದನಂತರ ಅನೇಕಾನೇಕ ಸಣ್ಣ ಪುಟ್ಟ ಸಂಸ್ಥಾನಗಳು ಬಹು ಬೇಗ ಮಾಯವಾಗಿ ಬಿಟ್ಟವು. ನಮ್ಮ ಹಿಂದೂಸ್ಥಾನದಲ್ಲಿ ಪುದುಕೋಟೆ, ಕೊಚ್ಚಿ, ತಿರುವಾಂಕೂರು, ಇತ್ಯಾದಿ, ಅನೇಕ ಸಣ್ಣ ಸಣ್ಣ ಸಂಸ್ಥಾನಗಳು ಇದ್ದವು. ಇಂಥ ಸಂಸ್ಥಾನಗಳೆಲ್ಲವೂ ಸುಮಾರು 562 ಇದ್ದುವು. ಅವುಗಳಲ್ಲಿ ಬಹು ಭಾಗದ ಸಂಸ್ಥಾನಗಳಲ್ಲಿ ಕೆಲವು ವಿಲೀನೀಕರಣವಾಗಿಹೋದವು, ಇಲ್ಲವೇ ಅಕ್ಕಪಕ್ಕದಲ್ಲಿದ್ದಂಥ ದೊಡ್ಡ ರಾಜ್ಯಗಳಲ್ಲಿ ಐಕ್ಯವಾಗಿ ಹೋದವು. ಅದೇ ರೀತಿಯಾಗಿ ಒಂದು ವೇಳೆ ಆ ದಿವಸ ಅವರು ಈ ಮೈಸೂರನ್ನು ಸಹ ಮಾಡಿಬಿಟ್ಟಿದ್ದರೆ—ಇದನ್ನು ಆ ಬೊಂಬಾಯಿ ಅಥವಾ ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿ ಬಿಟ್ಟಿದ್ದರೆ ಆ ದಿವಸ ವಲ್ಲಭಾಯಿರವರಿಗೆ ಹಾಗೆ ಆಗಕೂಡದೆಂದು ಒಂದು ಕಿರು ಬೆರಳನ್ನೂ ಸಹ ತೋರಿಸತಕ್ಕಂಥ ಅಭಿಪ್ರಾಯ ಇಲ್ಲದಿರತಕ್ಕಂಥ ಸದಸ್ಯರಿಗೆ ಇರಲಿಲ್ಲವೆಂದು ಹೇಳುತ್ತೇನೆ. ಹೀಗಿರುವಾಗ ಒಂದು ಮಾತು ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದರು.

4-30 P.M.

Sri A. V. NARASIMHA REDDY (ಬೆಂಗಳೂರು—ದಕ್ಷಿಣ).—Itwas a viable unit for administration. There was no necessity.

Sri K. PATTABHIRAMAN.—My friend, wait for a while. Bear with me for a little longer.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ (ಗೌರಿಬಿದನೂರು).—ಮೊಗಲಾಯರ ದರ್ಬಾರು ಇದ್ದರೆ ಆಗುತ್ತಿತ್ತು.

ಶ್ರೀ ಕೆ. ಪಟ್ಟಾಭಿರಾಮನ್.—ಈ ಕಾರ್ಯ ಕಾಂಗ್ರೆಸ್ ದೃಷ್ಟಿಯಿಂದ ನೋಡಿದರೆ ಈಚೆಗೆ ನಡೆದ ಘಟನೆಗಳ ದೃಷ್ಟಿಯಿಂದ ನೋಡಿದರೆ ನಮಗೆ ಏನು ಕಾಣುತ್ತದೆ? ಈಗತಾನೇ ನಡೆದಂಥ ಒಂದು ಘಟನೆಯನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳನ್ನೂ ನಮಗೆ ಸೇರಿಸಿ ಕೊಟ್ಟರು. ಅದನ್ನು ನಾವು ಕೇಳಲಿಲ್ಲ. ತನ್ನಷ್ಟಕ್ಕೆ

(ಶ್ರೀ ಕೆ. ಪಟ್ಟಾಭಿರಾಮನ್.)

ತಾನೇ ಇಂಡಿಯಾ ಸರ್ಕಾರದವರು ಬೇರೆ ಕಾರಣಗಳಿಂದ, ಡಾ|| ಆರ್. ನಾಗನಗೌಡರ ಸ್ವಪ್ರೇರಣೆಯಿಂದ ಈ ತಾಲ್ಲೂಕುಗಳನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿದರು. ಮೈಸೂರು ಸಂಸ್ಥಾನ ಮತ್ತು ಇತರ ಸಂಸ್ಥಾನಗಳ ಚರಿತ್ರೆಯ ಹಿನ್ನೆಲೆಯನ್ನು ನಾವು ನಮ್ಮ ದೃಷ್ಟಿಗೆ ತೆಗೆದುಕೊಂಡರೆ ಅವು ಆಗಿನ ಸಂದರ್ಭಗಳಿಗನುಗುಣವಾಗಿ ಬೆಳೆಯುತ್ತಾ ಬಂದಿದೆ. ನೈಜವಾದ ಬೆಳವಣಿಗೆ ಸ್ವಾಭಾವಿಕವಾಗಿ ಬೆಳೆಯುತ್ತಾ ಬಂದಿರುವುದರಿಂದ ಅಲ್ಲಿಯ ಜನ ನಮ್ಮನ್ನು ಸೇರಬೇಕೆಂದು ಹಾತೊರೆಯುತ್ತಿದ್ದಾರೆ, ಅದಕ್ಕೆ ನಾವು ಪ್ರತೀಕಾರ ಮನೋಭಾವನೆಯನ್ನು ತೋರಬೇಕಾಗಿಲ್ಲ. ನನ್ನ ಮಾನ್ಯ ಮಿತ್ರರಾದಂಥ ಶ್ರೀಮಾನ್ ಸಿದ್ದಲಿಂಗಯ್ಯನವರು ಎರಡು ಭಾವನೆಗಳನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅದನ್ನು ಒತ್ತಿ ಹೇಳಬೇಕೆಂಬುದೇ ನನ್ನ ಆಶೆ. ಪ್ರಾಯಶಃ ಈ ಮಹಾಸಭೆಗೆ ಅವರು ಕೊಟ್ಟಂಥ ಸೂಚನೆ ಬಹಳ ಹಿತಕರವಾಗಿದೆ. ಈ ದಿವಸ ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಮೈಸೂರು ಕರ್ಣಾಟಕ ಪ್ರಾಂತವಾಗುತ್ತದೆ ಎಂಬುದು ಮಾತ್ರವಲ್ಲ. ಅದಕ್ಕಿಂತ ಹೆಚ್ಚಿಗೆ ಈ ಮಹಾಸಭೆ ಯೋಚನೆ ಮಾಡಬೇಕಾದ ಪ್ರಶ್ನೆ ಫಜಲಾಲಿ ಸಮಿತಿಯವರ ಕಾರ್ಯವ್ಯಾಪ್ತಿ ಏನು, ಫಜಲಾಲಿ ಸಮಿತಿಯವರು ಏತಕ್ಕೆ ನಿಯೋಜಿತರಾಗಿದ್ದಾರೆ ಎಂಬುದು. ಇದರ ಹಿನ್ನೆಲೆಯನ್ನು ಯೋಚನೆ ಮಾಡುವಾಗ ತನಗೆ ತಾನೇ ಇತರ ಪ್ರಾಂತಗಳು ಅನಿವಾರ್ಯವಾಗಿ ಆಗಬೇಕು, ಹಾಗಿರುವುದರಿಂದ ಈ ರೀತಿ ಅನಿವಾರ್ಯ ಸಂದರ್ಭದಲ್ಲಿ ಮೈಸೂರು ಮೈಸೂರಾಗಿಯೇ ನಿಲ್ಲುತ್ತದೆಯೇ? ಸೇರತಕ್ಕಂಥ ಇತರ ಭಾಗಗಳ ರೂಪರೇಖೆಗಳು ಏನು? ಭಾಷಾ ಪ್ರಾಬಲ್ಯವೇನು? ಇಂತಹ ಪ್ರಶ್ನೆಗಳು ನಮ್ಮ ಮುಂದೆ ಬರುವುದು ಸ್ವಾಭಾವಿಕ. ಆದರೆ ಅವು ಆಮೇಲೆ ಬರತಕ್ಕ ಪ್ರಶ್ನೆಗಳೇ ಹೊರತು ಈಗ ನಮ್ಮ ಮುಂದೆ ಇರುವ ಮೂಲಭೂತವಾದ ಪ್ರಶ್ನೆ ಏನೆಂದರೆ ಇಂಡಿಯಾ ದೇಶದ ಪುನರ್ನಿರ್ಮಾಣ. ಈ ಇಂಡಿಯಾ ದೇಶದ ಪುನರ್ನಿರ್ಮಾಣವನ್ನು ಬೇರೆ ದೃಷ್ಟಿಯಿಂದ ನೋಡಬೇಕೆಂದು ಮಾನ್ಯ ಸಭೆಯನ್ನು ಕೇಳಿಕೊಳ್ಳುತ್ತೇನೆ. ನನ್ನ ಮಿತ್ರರಾದಂಥ ಶ್ರೀಮಾನ್ ಸಿದ್ದಲಿಂಗಯ್ಯನವರು ಇದನ್ನು ಬಹಳ ಚೆನ್ನಾಗಿ ಹೇಳಿದರು. 20-25 ವರ್ಷಗಳಕಾಲ ಈ ದೇಶದಲ್ಲಿ ಮಹಾ ಸ್ವರಾಜ್ಯ ಚಳವಳಿ ನಡೆಯುತಕ್ಕಂಥ ಕಾಲದಲ್ಲಿ ಆಗಿನ ದೇಶದ ಸ್ಥಿತಿಗತಿಗನುಸಾರವಾಗಿ ಪ್ರಾಂತಗಳು ನಿರ್ಮಾಣವಾಗತಕ್ಕದ್ದು ಅಗತ್ಯವೆಂಬ ಭಾವನೆ ಮೊದಲಿನಿಂದಲೂ ಮೂಡಿಬಂದಿತ್ತು. ಒಂದಾನೊಂದು ಕಾಲದಲ್ಲಿ ನ್ಯಾಯಕ್ಕೆ ಸರಿಯಾಗಿಲ್ಲದ, ತಾತ್ವಿಕವಾಗಿ ಸರಿಯಾಗಿಲ್ಲದ, ಏನೋ ಒಂದು ಕಾರಣದಿಂದ ಆಳರಸರಾಗಿದ್ದಂಥ, ಜಯಪ್ರದವಾಗಿ ಬೆಳೆದಂಥ ಬ್ರಿಟಿಷ್ ಸಾಮ್ರಾಜ್ಯದ ಮಾರ್ಗದಲ್ಲಿ ತನಗೆತಾನೇ ನಿರ್ಮಾಣವಾಗಿರತಕ್ಕಂಥ ಸಂಸ್ಥಾನಗಳಿಗೆ, ನ್ಯಾಯಸಮ್ಮತವಾದ, ಇಲ್ಲವೇ, ಆರ್ಥಿಕ, ರಾಜಕೀಯ, ಬೆಳವಣಿಗೆ ದೃಷ್ಟಿಯ ಚೌಕಟ್ಟು ಇರಲಿಲ್ಲ. ಹೀಗೆ ಯಾವ ರೀತಿಯ ಚೌಕಟ್ಟಿಗೂ ಒಳಪಡದಂಥ ಸಂಸ್ಥಾನಗಳನ್ನು ಒಂದು ರೀತಿಯಲ್ಲಿ ಅಳವಡಿಸಿಕೊಂಡು ನಮ್ಮ ದೇಶದಲ್ಲಿ ಅವುಗಳು ಪುನರ್ನಿರ್ಮಾಣವಾಗಲಿ ಎಂಬ ಉದ್ದೇಶವು ನಮ್ಮ ಜನಗಳಲ್ಲಿದ್ದಿತು. ಈಗ ಸ್ವರಾಜ್ಯ ಸ್ಥಾಪನೆಯಾಯಿತು. ಇದಾದಮೇಲೆ ಸಂಸ್ಥಾನಗಳ ಪುನರ್ನಿರ್ಮಾಣ ಮಾಡಬೇಕೆಂಬ ಯೋಚನೆ ಇವೊತ್ತು ಬಂದಿದ್ದಲ್ಲ; ಬಹಳ ಕಾಲದಿಂದ ಬಂದಿತ್ತು ಎಂಬುದು ಗೊತ್ತಾಗುತ್ತದೆ. ಆದ್ದರಿಂದ ನನ್ನ ಸ್ಪಷ್ಟ ನಿಲುವನ್ನು ಒಂದು ಮಾತಿನಲ್ಲಿ ಸ್ಪಷ್ಟಪಡಿಸಬೇಕು ಎಂದು ಇದ್ದೇನೆ. ಇವೊತ್ತಿನ ದಿವಸ ಮಾತನಾಡುವ ಈ ಮಹಾ ಸಭೆಯ ಮಾನ್ಯ ಸದಸ್ಯರಮೇಲೆ ಒಂದು ಪರಿಣಾಮವುಂಟುಮಾಡಬೇಕು ಎಂದು ನಾನು ಮಾತನಾಡುತ್ತಿಲ್ಲ. ನನ್ನ ಜವಾಬ್ದಾರಿ ಏನು, ನನ್ನ ನಿಲುವು ಏನು ಎಂದು ಇಷ್ಟುಮಾತ್ರ ಹೇಳಲು ನಿಂತಿದ್ದೇನೆ. 1947ರ ಹಿಂದೆ ನಡೆದಂಥ ವಿಚಾರಗಳ ಬಗ್ಗೆ ಶ್ರೀ ಸಿದ್ದಲಿಂಗಯ್ಯನವರು ಒಂದು ರೀತಿಯಲ್ಲಿ ಸೂಚನೆ ಮಾಡಿದ್ದಾರೆ. ಮೈಸೂರು ಕಾಂಗ್ರೆಸ್ ಇತಿಹಾಸದ ಸಂಬಂಧವಾಗಿ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಇಲ್ಲಿರುವ ಅನೇಕ ಕಾಂಗ್ರೆಸ್ ಸದಸ್ಯರು ಮೈಸೂರು ಕಾಂಗ್ರೆಸ್ಸಿನ ಹಿರಿಯ ನಾಯಕರಾಗಿದ್ದರು. ನಾನು ಒಂದಾನೊಂದು ಕಾಲದಲ್ಲಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆ. ಆ ಕಾಲದಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನ, ಕಾರ್ಯಕಾರಿ ಸಮಿತಿ ಅಧಿವೇಶನ ಮತ್ತು ವಾರ್ಷಿಕ ಅಧಿವೇಶನ, ಈ ಪ್ರತಿಯೊಂದು ಅಧಿವೇಶನವನ್ನು ತೆಗೆದುಕೊಂಡರೂ ಕೂಡ ಮೈಸೂರು ಅಂತರ್ಗತವಾದ ಕರ್ಣಾಟಕ ನಿರ್ಮಾಣಕ್ಕೆ ಒಂದು ನಿರ್ಣಯವನ್ನು ಮಾಡಿ ದೇಶಕ್ಕೆ ಕರೆ ಕೊಡುತ್ತಾ ಬಂದರು. ಆದ್ದರಿಂದ ಇದಕ್ಕೆ ನೈತಿಕ ಪೂರ್ಣವಾದ ಜವಾಬ್ದಾರಿ ಇದೆ. ಇದನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟರೂ ಸಾಧ್ಯವಾಗುವುದಿಲ್ಲ. ನನ್ನಮಟ್ಟಿಗೆ ಹೇಳುವುದಾದರೆ ಕಾಂಗ್ರೆಸ್‌ಬಿಟ್ಟು ಹೊರಗೆ ಬಂದರೂ 1947ರ ಹಿಂದೆ ಪ್ರತಿಯೊಂದು ಅಧಿವೇಶನದಲ್ಲೂ ಕಾಂಗ್ರೆಸ್ ಮಾಡಿದಂಥ ನಿರ್ಣಯವನ್ನು ನಾನಂತೂ ಅಲ್ಲಗಳೆದು ಲೀಲಾಜಾಲವಾಗಿ ತಿರಸ್ಕರಿಸುವುದಿಲ್ಲ. ಅದಕ್ಕೆ ನನ್ನ ಪೂರ್ಣ ನೈತಿಕ ಜವಾಬ್ದಾರಿ ಇದೆ. ಒಂದೆರಡು ಅಧಿವೇಶನದಲ್ಲೂ ನಾನೇ ಆ ನಿರ್ಣಯವನ್ನು ಸಭೆಯಮುಂದೆ ಇಟ್ಟಿದ್ದೇನೆ ಎಂಬುದು ನನ್ನ ನೆನಪಿನಲ್ಲಿದೆ. ಹೀಗೆ ಹತ್ತಾರು ವರ್ಷಗಳ ಕಾಲ ದೇಶದ ಮುಂದೆ, ಜನಗಳ ಮುಂದೆ ಈ ರೀತಿ ನಡೆಯುತ್ತಾ ಬಂದಿದೆ. ಕರ್ಣಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯವರು ಫಜಲಾಲಿ ಸಮಿತಿಗೆ ಕೊಟ್ಟಿರತಕ್ಕಂಥ ವರದಿ ನೋಡಿ ಬಹಳ ಸಂತೋಷವಾಯಿತು. ಹೀಗೆ 1947ರ ಹಿಂದೆಯೂ ಮತ್ತು 1947ನೇ ಇಸವಿಯಾದ ನಂತರವೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೂ ಈಗ ಕಾಂಗ್ರೆಸ್ ಅಧ್ಯಕ್ಷರಾದಂಥ ಶ್ರೀ ಎಸ್. ಚೆನ್ನಯ್ಯನವರೂ ಜನರ ಮುಂದೆ ಒಂದೇ ರೀತಿಯಾದ ಧೋರಣೆಯನ್ನು ಇಡುತ್ತಾ ಬರುತ್ತಿದ್ದಾರೆ ಮತ್ತು ಜನರಿಗೆ ವಾಗ್ದಾನವನ್ನು ಕೊಟ್ಟಿದ್ದಾರೆ. ನಾನಂತೂ ಅದನ್ನು ಬಿಟ್ಟು ಹೋಗುವುದಕ್ಕೆ ತಯಾರಾಗಿಲ್ಲ. ಅದು ಕೇವಲ ಹಿಂದೆ ಮಾಡಿದ್ದಾಯಿತು. ಚಾರಿತ್ರಕ ದೃಷ್ಟಿ ಮರೆತು ಹೋಗಕೂಡದು. ಈ ದಿವಸ ನಮ್ಮ ಮುಂದೆ ಇರುವುದೆಲ್ಲವನ್ನೂ ತಿರಸ್ಕರಿಸಬೇಕು, ಹಿಂದೆ ಇದ್ದಂಥವರಿಗೆ ಬುದ್ಧಿ ಕಡಿಮೆ ಇತ್ತು, ಈಗ 1955ನೇ ಇಸವಿಯಲ್ಲಿ ನಾವು ಹೆಚ್ಚಿಗೆ ಬುದ್ಧಿವಂತರಾಗಿದ್ದೇವೆ ಎಂದು ಹೇಳಿದರೆ ಅದರಿಂದ ಅನರ್ಥವಾಗುತ್ತದೆ. ಈಗ ಹೊಸ ಸನ್ನಿವೇಶ ಏನೂ ನನಗೆ ಕಾಣುತ್ತಾ ಇಲ್ಲ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—1947ರಿಂದ ಈಚೆಗೆ ಕಾಂಗ್ರೆಸ್ ಹಿಂದೆ ಮಾಡಿದ ವಾಗ್ದಾನಕ್ಕೆ ಬದ್ಧರಾಗಿಲ್ಲ.

ಶ್ರೀ ಕೆ. ಪಟ್ಟಾಭಿರಾಮನ್.—ಅದು ನನಗೆ ಗೊತ್ತಿಲ್ಲ.

Sri G. A. THIMMAPPA GOWDA (Arkalgud).—You have taken it very seriously.

ಶ್ರೀ ಕೆ. ಪಟ್ಟಾಭಿರಾಮ್.—ಈ ದಿವಸ ಹಿಂದೆ ಕಾಂಗ್ರೆಸ್ ವೇದಿಕೆಯಮೇಲೆ ನಿಂತು ಮಾಡಿದ ಪರಮ ಪವಿತ್ರವಾದಂಥ ಆಶ್ವಾಸನಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ನಾನು ತಯಾರಾಗಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆಗ ಇಂತಹ ಆಡಳಿತ ಸಮಸ್ಯೆಗಳು ಉದ್ಭವ ಆಗಿರಲಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಆ ಹೊತ್ತು, ವೇದಿಕೆಯಮೇಲೆ ನಿಂತು ಜನರಮೇಲೆ ಪರಿಣಾಮವನ್ನು ಮಾಡಿದಂಥ ಶಕ್ತಿ ಈಗಲೂ ತಮ್ಮಲ್ಲಿ ಉಳಿದಿದೆ.

ಶ್ರೀ ಕೆ. ಪಟ್ಟಾಭಿರಾಮ್.—ನಾನು ಹಿಂದೆ ಆಡಿದ ಮಾತುಗಳು ಇನ್ನೂ binding ಆಗಿ ಉಳಿದಿವೆ. ನನಗೆ ಧೈರ್ಯವಾಗಿ ಅದನ್ನು ಬಿಟ್ಟು ಹೋಗುವುದಕ್ಕೆ ಶಕ್ತಿ ಇಲ್ಲ ಎಂಬುದನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಆದರೆ ಮಾನ್ಯ ಸದಸ್ಯರಮೇಲೆ ಏನೊಂದೂ ಪರಿಣಾಮವುಂಟುಮಾಡುವುದು ನನ್ನ ಉದ್ದೇಶವಲ್ಲ. ತಮಗೆ ಈ ವಿಚಾರದಲ್ಲಿ ಯಾವ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೂ ಪೂರ್ಣ ಸ್ವಾತಂತ್ರ್ಯವುಂಟು. ಆದರೆ ನಾನು ಮಾತ್ರ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದೇನೆ. ನಾನು ಈ ವಿಷಯದಮೇಲೆ ಮಾತನಾಡಲು ಬಹಳ ಹೊತ್ತು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನು ರಿಪೋರ್ಟಿನಮೇಲೆ ಮಾತನಾಡುತ್ತೇನೆ. ಶೇಷಾದ್ರಿ ಕಮಿಟಿಯ ರಿಪೋರ್ಟ್ ಪ್ರಾಸಂಗಿಕವಾಗಿ ನಮ್ಮ ಮುಂದೆ ಇದೆ. ಒಂದನೆಯದು, ಶೇಷಾದ್ರಿ ಕಮಿಟಿಯವರ ವರದಿ; ಇನ್ನೊಂದು ಕರ್ಣಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯವರು ಕೊಟ್ಟಿರತಕ್ಕದು; ಮತ್ತು ಮೂರನೆಯದು, ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರಿಂದ ನಿಯೋಜಿತವಾಗಿ ಶ್ರೀಗಳಾದ ಸಿದ್ದಲಿಂಗಯ್ಯನವರು, ಸುಬ್ರಹ್ಮಣ್ಯಂರವರು, ಎಸ್. ಚನ್ನಯ್ಯನವರು, ಎ. ಜಿ. ಬಂದಿಗೌಡರು ಮತ್ತು ನಾರಾಯಣಗೌಡರುಗಳನ್ನೊಳಗೊಂಡ ಸಮಿತಿಯವರು ಒಮ್ಮತ ಒಪ್ಪಿಗೆಯನ್ನು ಕೊಟ್ಟು ತಯಾರಿಸಿರುವ ಸಾಹಿತ್ಯ—ಇವು ಮೂರಕ್ಕೂ ನಾನು ತುಂಬ ಬೆಲೆ ಕೊಡುತ್ತೇನೆ. ನಾನು ಕಾಂಗ್ರೆಸ್ಸನ್ನು ಬಿಟ್ಟರೂ ಕೂಡ, ಈ ಬಗ್ಗೆ ಹಿಂದಿನ ಕಾಂಗ್ರೆಸ್ಸಿನ ನಿಲುವು, ಕಾಂಗ್ರೆಸ್ಸಿನ ನೀತಿ ನನ್ನನ್ನು ಇನ್ನೂ ಬಾಧಿಸುತ್ತಿದೆ.

ಆದ್ದರಿಂದ ಈಗ ನಮ್ಮ ಮುಂದಿರುವುದು, ಒಂದು ಶೇಷಾದ್ರಿ ಕಮಿಟಿಯ ರಿಪೋರ್ಟು; ಅದಕ್ಕೆ ಪಕ್ಕದಲ್ಲಿ ಈ ಎರಡು ಸಾಹಿತ್ಯಗಳು—ಒಂದು, ಕರ್ಣಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯವರು ಫಜಲಾಲಿ ಕಮಿಷನ್ನಿನವರಿಗೆ ಒಪ್ಪಿಸಿರುವುದು; ಇನ್ನೊಂದು ಮೈಸೂರು ಕಾಂಗ್ರೆಸ್ ಕಮಿಟಿಯಿಂದ ನಿಯೋಜಿತವಾದ ಮಂಡಲಿಯವರು ಇಡೀ ಕರ್ಣಾಟಕ ಪ್ರಾಂತ್ಯವನ್ನು ಸಂಚಾರಮಾಡಿ ಡೆಲ್ಲಿಗೂ ಹೋಗಿ ವಲ್ಲಭಾಯ್ ಪಟೇಲ್ ಮತ್ತು ನೆಹರೂ ಮುಂತಾದವರನ್ನು ಕಂಡು ಒಪ್ಪಿಸಿರತಕ್ಕ ಸಾಹಿತ್ಯ. ಇವುಗಳನ್ನೆಲ್ಲಾ ನೋಡಿದರೆ ನನಗನ್ನಿಸುತ್ತದೆ: ಶ್ರೀ ಸಿದ್ದಲಿಂಗಯ್ಯನವರು ಹೇಳಿದಹಾಗೆ, ಈ ವರದಿಗಳ ವಿಚಾರದಲ್ಲಿ ಪರವಾಗಿಯೂ, ವಿರೋಧವಾಗಿಯೂ ಎಷ್ಟು ಬೇಕಾದರೂ ಹೇಳಬಹುದು, ಆದರೆ ಅದು ಮುಖ್ಯವಲ್ಲ. ಶೇಷಾದ್ರಿ ಕಮಿಟಯವರ ವರದಿಯ ವಿಚಾರ ಮಾತನಾಡುವುದಾದರೆ, ಅವರು ಎಷ್ಟರಮಟ್ಟಿಗೆ ತಯಾರುಮಾಡಿದ್ದಾರೆ, ಅವರ ವ್ಯಾಪ್ತಿ ಎಷ್ಟರಮಟ್ಟಿಗಿತ್ತು—ಈ ದೃಷ್ಟಿಯಿಂದ ಅವರು ಮಾಡಿರುವ ರಿಪೋರ್ಟಿನಿಂದ ಬಹಳ ಉಪಕಾರ ಮಾಡಿದ್ದಾರೆಂದೇ ಹೇಳಬೇಕು. ಅವರಿಗಿದ್ದ ನಿಯಮಿತ ಕಾಲದಲ್ಲಿ, ತಮಗೆ ದೊರಕಿದಂಥ ವಿಷಯಗಳಲ್ಲಿ ಆದಷ್ಟು ಅಂಕಿ ಅಂಶಗಳನ್ನು ಸಂಗ್ರಹಿಸಿಕೊಟ್ಟು ಉಪಕಾರ ಮಾಡಬೇಕೆಂಬ ದೃಷ್ಟಿಯಿಂದ ಮಾಡಿದ್ದಾರೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅಂತೆಯೇ, ಇದಕ್ಕಾಗಿಯೇ ಜೀವವೆಲ್ಲಾ ಶ್ರಮಿಸುತ್ತಿರುವ ಕರ್ಣಾಟಕ ಪ್ರಾಂತ ಸಮಿತಿಯವರೂ ಜವಾಬ್ದಾರಿಯುತವಾದ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆನ್ನಬೇಕು. ಅದರಲ್ಲೂ ಬಹಳ ಮಾನ್ಯತೆ ಪಡೆದಿರತಕ್ಕ ಪೂಜ್ಯತೆಯನ್ನು ಹೊಂದಿರತಕ್ಕ ಮಹಾಮಹಾ ನಾಯಕರು ಸೇರಿದ್ದರು. ಈ ಮಾನ್ಯ ಸಭೆಯ ಕೆಲವು ನಾಯಕರೂ ಅದರಲ್ಲಿದ್ದರು. ಆದ್ದರಿಂದ ಆ ಸಾಹಿತ್ಯವನ್ನೂ ಅಷ್ಟು ಸುಲಭವಾಗಿ ಬಿಡುವುದಕ್ಕೆ ಸಾಧ್ಯವಿಲ್ಲ. ಮೇಲಾಗಿ, ನಮ್ಮ ವರ್ಕಿಂಗ್ ಕಮಿಟಿಯವರು ಕೊಟ್ಟಿರುವುದಿದೆ.

ಇವೆಲ್ಲವನ್ನೂ ಮುಂದಿಟ್ಟುಕೊಂಡು ಮೈಸೂರು ಹಾಗೆಯೇ ಇರಬೇಕೇ ಅಥವಾ ವಿಸ್ತಾರವಾಗಬೇಕೇ, ವಿಸ್ತಾರವಾಗಬೇಕಾದರೆ ಯಾವ ಪ್ರಾಂತ ವಿಸ್ತಾರವಾಗಬೇಕು ಎಂಬುದನ್ನು ನೋಡೋಣ. ಈ ಸಂದರ್ಭದಲ್ಲಿ ಕರ್ಣಾಟಕ, ಕನ್ನಡ ಎನ್ನುವ ಪದಗಳ ಭೇದಗಳನ್ನು ನಾನು ಅಷ್ಟಾಗಿ ಬೆಳೆಸಲು ತಯಾರಾಗಿಲ್ಲ. ಕರ್ಣಾಟಕವೆಂದರೆ ಕರಿನಾಡು, ಕಪ್ಪುನಾಡು ಎಂದು ಹೇಳಿ ಅದರೊಳಗಿರತಕ್ಕದು ಏನೋ ಕೆಟ್ಟದು ಎಂಬ ಭಾವನೆಯಿಂದ ಕೆಲವರು ಹೇಳುವುದುಂಟು ಆ ಅರ್ಥ ಅಷ್ಟಾಗಿ ಗಮನಿಸಬೇಕಾದ್ದಲ್ಲ. ಮುಖ್ಯವಾಗಿ ನಾವೀಗ, ಕ್ಷಣಕಾಲ ಕರ್ಣಾಟಕ ಏಕೀಕರಣವೆಂಬ ಭಾವನೆಯನ್ನು, ಭಾಷೆಗಳಮೇಲೆ ಪ್ರಾಂತ ನಿರ್ಮಾಣವೆಂಬ ಭಾವನೆಯನ್ನು ಒತ್ತಟ್ಟಿಗಿಟ್ಟು, ಕೇವಲ ಮೈಸೂರಿನ ಹಿತವನ್ನು, ಮೈಸೂರಿನಮೇಲಣ ಮಮತೆ, ಅಭಿಮಾನವನ್ನು ಪ್ರಾಮುಖ್ಯವಾಗಿಟ್ಟುಕೊಂಡು ಈ ಪ್ರಶ್ನೆಯನ್ನು ನೋಡೋಣ. ಯಾರೇ ಆಗಲಿ ಮೈಸೂರು ಮೈಸೂರಿನಂತೆಯೇ ಉಳಿದರೆ ಅದಕ್ಕೆ ಶ್ರೇಯಸ್ಸು, ಶ್ರೇಯೋಭಿವೃದ್ಧಿಯಿದೆ, ಜೊತೆಗೆ ಸ್ವಲ್ಪ ಸೇರಿದರೂ ಅದಕ್ಕೆ ಶ್ರೇಯಸ್ಸು ಬರುವುದಿಲ್ಲ ಎಂದು ಬ್ರಹ್ಮನು ಹಣೆಯಮೇಲೆ ಬರೆದಹಾಗೆ ಹೇಗೆ ಬರೆದಾರು! ಏಕೆಂದರೆ, ನಾವಿದನ್ನು ಸ್ವಲ್ಪ ತಾಳ್ಮೆಯಿಂದ ಯೋಚನೆ ಮಾಡೋಣ. ಈ ರಿಪೋರ್ಟಿನಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ತೆಗೆದುಕೊಂಡು ಮೈಸೂರಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನೂ ಇತರ ಭಾಗಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನೂ ಹೋಲಿಸಿ ನೋಡುವಾಗ ಮಾನ್ಯ ಪುಟ್ಟಸ್ವಾಮಿಯವರೇ ಒಂದೊಂದು ವಿಷಯವನ್ನೂ ತೆಗೆದುಕೊಂಡು ಮೈಸೂರು ಹಿಂದೆಯಿದೆ, ಮೈಸೂರು ಮುಂದೆಯಿದೆ ಎಂದೆಲ್ಲವನ್ನೂ ವಿವರಿಸಿದರು. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು, ಮೈಸೂರು ಸರ್ವಾಂಗ ಸುಂದರವಾಗಿದೆಯೆನ್ನುವಾಗ, ಇದೇನು! ಕಮ್ಮಿಯಾಯಿತೆಂದು ಹೇಳುತ್ತಿದ್ದಾರಲ್ಲಾ ಎಂದು. ಅಂದಮೇಲೆ ಯಾರೇ ಆಗಲಿ, ಕ್ಷಣಕಾಲ ಕಾರವಾರ, ಬಿಜಾಪುರ ನಮಗೆ ಬರಬೇಕೆ ಬೇಡವೆ ಎಂಬ ಪ್ರಶ್ನೆಯನ್ನು ಬಿಟ್ಟು ನೋಡುವುದಾದರೂ; ಮೈಸೂರು ಈಗಿರುವಂತೆ ಸರ್ವಾಂಗ ಸುಂದರವಾಗಿದೆ, ಸರ್ವ ಸಂಪದ್ಯುಕ್ತವಾಗಿ, ಇಲ್ಲಿನ ಜನರ ಜೀವನಮಟ್ಟ ಹೆಚ್ಚಿಗಿದ್ದು ಬಹಳ ಸೌಖ್ಯವಾಗಿದೆ, ಸ್ವರ್ಗ ನಿರ್ಮಾಣ ಮಾಡಿದ್ದೇವೆ ಎಂದು ಹೇಳುವ ಹಾಗಿಲ್ಲ. ಕ್ಷಣಕ್ಷಣದಲ್ಲೂ ನಾವು ನಮ್ಮ ಮಾನ್ಯ ಮುಖ್ಯ ಮಂತ್ರಿಗಳನ್ನು ಅದು ಬೇಕು, ಇದು ಬೇಕು ಎಂದು ಕೇಳುತ್ತಾ, ಇಲ್ಲಿ ಆ ಎಲ್ಲ ಸಂಪತ್ತೂ ಬಂದಿಲ್ಲ, ಸ್ವರ್ಗ ನಿರ್ಮಾಣವಾಗಿಲ್ಲವೆಂಬುದನ್ನು ನಮ್ಮ ಮಾತುಗಳಿಂದಲೇ ಪ್ರಪಂಚಕ್ಕೂ ತೋರಿಸುತ್ತಿದ್ದೇವೆ.

(ಶ್ರೀ ಕೆ. ಪಟ್ಟಾಭಿರಾಮನ್.)

ಏನೋ ಕಾರಣಾಂತರದಿಂದ, ಅದೃಷ್ಟವಶಾತ್ ಈ ದೇಶ ಸ್ವಲ್ಪ ಅಭಿವೃದ್ಧಿಯಲ್ಲಿದ್ದಾಕ್ಷಣಕ್ಕೇ, ಅದನ್ನೇ ಕಾರಣವಾಗಿಟ್ಟುಕೊಂಡು ವಾದಿಸುವುದು ಸರಿಯಲ್ಲ. ಆ ದೃಷ್ಟಿ ಸರಿಯೇ ಎಂಬುದನ್ನು ನೋಡಬೇಕು. ಸ್ವಲ್ಪ ನಿಧಾನವಾಗಿ ಈ ಪ್ರಶ್ನೆಯನ್ನು ಯೋಚನೆ ಮಾಡೋಣ. ವಿದ್ಯಾವಂತರ ಸಂಖ್ಯೆ ಹೈದರಾಬಾದಿನಲ್ಲಿ ಕಮ್ಮಿ ಇರಬಹುದು. ಆದರೆ ಮಿಕ್ಕ ಪ್ರಾಂತ್ಯಗಳಲ್ಲಿ ನಮಗಿಂತ ಜಾಸ್ತಿಯಿದೆಯೆಂಬ ಕಾರಣದ ಮೇಲೆ ನಾವು ಅವರೊಡನೆ ಸೇರುವುದಕ್ಕೆ ಸಾಧ್ಯವೇ? ಕೊಡಗಿನಲ್ಲಿ ವಿದ್ಯಾವಂತರ ಸಂಖ್ಯೆ ನಮಗಿಂತ ಜಾಸ್ತಿಯಾಗಿದೆಯೆಂದು ಹೇಳಿ ಅಲ್ಲಿನ ಪೂನಚಾರವರು ನಮ್ಮ ಮುಖ್ಯ ಮಂತ್ರಿಗಳಾಗಿರುವುದಕ್ಕಾಗುತ್ತದೆಯೇ? ಇನ್ನೊಂದು ಕಡೆ ರಸ್ತೆ ಜಾಸ್ತಿಯಿರುವುದರಿಂದ ಅಥವಾ ಇನ್ನೊಂದು ಜಾಸ್ತಿಯಿರುವುದರಿಂದ ನಾವು ಅವರೊಡನೆ ಸೇರಬೇಕೆಂದು ಹೇಳುವುದು ಸೂಕ್ತವೇ? ನಮ್ಮ ಮುಂದಿರತಕ್ಕ ಸಮಸ್ಯೆ ಅದಲ್ಲ.

ಈ ಸಂದರ್ಭದಲ್ಲಿ ಶ್ರೀಮಾನ್ ಕಂಠಿಯವರು ಕೊಟ್ಟಿರತಕ್ಕ ಸಾಹಿತ್ಯ ಸ್ವಲ್ಪಮಟ್ಟಿಗೆ ಮುಖ್ಯವೆಂದು ಹೇಳಬಹುದು. ಮೊನ್ನೆ ಇದೇ ವಿಷಯದಮೇಲೆ ಚರ್ಚೆ ನಡೆಯುತ್ತಿರುವಾಗ ನೋಡಿದ್ದರಲ್ಲಿ ಕಂಠಿಯವರ ಲೇಖನಗಳನ್ನು ಈ ಮಾನ್ಯ ಸಭೆಯಲ್ಲಿ ಎತ್ತಲಿಕ್ಕೆ ಅವಕಾಶವಿದೆಯೇ ಎಂದು ಕೂಡ ಕೆಲವರಿಗನ್ನಿಸಿತು. ಏಕೆಂದರೆ, ಕಂಠಿಯವರ ಸಾಹಿತ್ಯ ಅಧಿಕೃತವಾಗಿ ನಮ್ಮ ಮುಂದೆ ಕೊಟ್ಟಿದ್ದಲ್ಲವಾದ್ದರಿಂದ ಅದನ್ನು ಈ ಸಭೆಯಲ್ಲಿ ಪ್ರಸ್ತಾಪಿಸಲು ಸಾಧ್ಯವೇ ಎಂಬ ಅನುಮಾನ ನಮಗಿತ್ತು. ಆದರೆ, ಇವೊತ್ತು ಶ್ರೀಮಾನ್ ಪುಟ್ಟಸ್ವಾಮಿಯವರೇ ನಮಗೆ ಸಹಾಯ ಮಾಡಿಕೊಟ್ಟಂತಾಯಿತು. ಪುಟ್ಟಸ್ವಾಮಿಯವರು ಒಂದೊಂದು ಮಾತನ್ನೂ ಕಂಠಿಯವರ ರಿಪೋರ್ಟಿನಿಂದ ಎತ್ತಿಕೊಟ್ಟು ಉದಹರಿಸೋಣದರಿಂದ, ಆ ರಿಪೋರ್ಟು ಇಂದು ಈ ಸಭೆಯವರ ಮಾನ್ಯತೆಗೆ ಅರ್ಹವಾದದ್ದಾಯಿತು.

ಈಗ ಕಂಠೀಯವರ ರಿಪೋರ್ಟನ್ನು ತೆಗೆದುಕೊಂಡು ಅವರು ಯಾವ ದೃಷ್ಟಿಯಿಂದ ಈ ಕೆಲಸಕ್ಕೆ ಕೈಹಾಕಿದ್ದಾರೆಂಬುದನ್ನು ಸ್ವಲ್ಪ ಯೋಚನೆ ಮಾಡೋಣ. ವರಮಾನದ ವಿಚಾರದಲ್ಲಿ ಕಂಠಿಯವರು ಹೇಳುತ್ತಾರೆ. ಬರತಕ್ಕ ದುಡ್ಡಿನ ವಿಚಾರದಲ್ಲಿ ಕಮಿಟಿಯವರು ತೆಗೆದುಕೊಂಡಿರುವುದೆಲ್ಲವೂ ಕೂಡ ಜಿಲ್ಲಾ ಲೆವೆಲ್‌ಗಳಲ್ಲಿ ಯಾವ ಯಾವ ಬಾಬುಗಳಿಂದ, ಎಷ್ಟೆಷ್ಟು ಬರುತ್ತದೆಂಬುದನ್ನು ಮಾತ್ರ ತೆಗೆದುಕೊಂಡಿದ್ದಾರೆ; ಕೇಂದ್ರ ಸರ್ಕಾರದ ಮೂಲಕವಾಗಿ ಜಿಲ್ಲಾವಾರಾಗಿ ಸ್ವಾಭಾವಿಕವಾಗಿ ವಿಧಾಯಕವಾಗಿ ಬರಬಹುದಾದ ಹಣವನ್ನೇನೂ ಗಮನಕ್ಕೆ ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಇದು ಒಂದು ಗಮನಾರ್ಹವಾದ ವಿಷಯ. ಶೇಷಾದ್ರಿಯವರ ರಿಪೋರ್ಟ್ ಬಂದು ಇಷ್ಟು ದಿವಸವಾಗಿದ್ದರೂ, ಕಂಠಿಯವರ ಲೇಖನಗಳು ಸರಿಯಲ್ಲವೆಂದು ಹೇಳಿ ವಿಮರ್ಶೆಮಾಡಿ ವಿರುದ್ಧವಾದ ಲೇಖನಗಳಾವುವೂ ಇದುವರೆಗೂ ಬಂದಿಲ್ಲ. ಅಂದರೇನಾಯಿತು? ಶೇಷಾದ್ರಿ ಕಮಿಟಿಯವರು ಅವರಿಗಿರತಕ್ಕ ನಿಯಮಿತ ಕಾಲದಲ್ಲಿ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಮಾಡಿ ತಮ್ಮ ದೃಷ್ಟಿಯಿಂದ ಒಂದು ರಿಪೋರ್ಟ್ ಕೊಟ್ಟಿದ್ದಾರೆ; ಕಂಠಿಯವರು ಇನ್ನೊಂದು ದೃಷ್ಟಿಯಿಂದ ನೋಡಿ ತಮ್ಮ ಲೇಖನವನ್ನೂ ಮುಂದಿಟ್ಟಿದ್ದಾರೆ. ಆದ್ದರಿಂದ ಇಂದು ನಮಗೆ ಇವು ಮುಖ್ಯವಲ್ಲ. ಈ ವಿಷಯದಲ್ಲಿ ಶ್ರೀಮಾನ್ ಸಿದ್ದಲಿಂಗಯ್ಯನವರು ಹೇಳಿದ ಮಾತನ್ನು ನಾನು ಅಕ್ಷರಶಃ ಪಾಲಿಸುತ್ತೇನೆ. ನಾವು ಇಂದು ಮುಖ್ಯವಾಗಿ ಯೋಚನೆ ಮಾಡಬೇಕಾದದ್ದು, ನಮ್ಮ ಮೈಸೂರು ದೇಶದ ಸ್ಥಿತಿ ಹೇಗಿದೆ, ನಮ್ಮಲ್ಲಿರುವ ಹತ್ತು ಜಿಲ್ಲೆಗಳಿಗೆ ಇತ್ತ, ಅತ್ತ ಬೆಳೆಯಲು, ಅಭಿವೃದ್ಧಿ ಹೊಂದಲು ಅವಶ್ಯಕತೆಯಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಕರ್ಣಾಟಕ ಪ್ರಾಂತ್ಯವಾಗಬೇಕೆ, ಕನ್ನಡ ಪ್ರದೇಶಗಳು ಒಂದಾಗಿ ಸೇರಬೇಕೆ ಎಂಬುದನ್ನು ಯೋಚನೆ ಮಾಡಲು ಮೂಲಭೂತವಾಗಿರುವ ಈ ಒಂದೆರಡು ಅಂಶಗಳನ್ನು ನಾನು ತಮ್ಮ ಮುಂದೆ ಇಡಬಯಸುತ್ತೇನೆ.

Sri K. S. VASAN (Kolar Gold Field).—It appears to me that there is some slight contradiction in what you say. I want further clarification. While speaking, you have stated in the beginning that you are not going to depart from the stand the Congress took in the past. But now you are talking on the question of unification of Karnataka which is based on the linguistic principle. Now it appears to me that you are arguing for the territorial expansion of the Mysore State.

Sri K. PATTABHIRAMAN.—I think, I must answer him in English and then switch on to Kannada.

ನಾನು ಮೊದಲು ಒಂದು ನಿಲುವನ್ನು ಈ ಸಭೆಯ ಮುಂದಿಟ್ಟಿದ್ದೇನೆ. ಈಗ ಆ ನಿಲುವನ್ನು ಇಲ್ಲಿ ವಿಮರ್ಶಾ ದೃಷ್ಟಿಯಿಂದ ವಿಮರ್ಶೆ ಮಾಡುತ್ತಾ ಮಾಡುತ್ತಾ ಕಟ್ಟ ಕಡೆಗೆ ನಾನು ಮೊದಲು ಹೇಳಿದ ನಿಲುವೇ ನನ್ನ ನಿಲುವು ಎಂದು ಹೇಳುವುದಕ್ಕೆ ಬರುತ್ತೇನೆ.

Sri T. SIDDALINGAIYA.—It is a difference without distinction.

Sri K. PATTABHIRAMAN.—All right. I accept.

Sri K. S. VASAN.—The law of difference is there.

Sri K. PATTABHIRAMAN.—The position is like this. Once upon a time when I remained as a member of the Congress we had passed resolutions and made it unmistakably clear to the world at large that Karnataka Province including Mysore must be established. No. 1. No. 2: What I am trying to make out is, Mysore cannot afford to remain as it is. It is bound to expand; it is in its own interests and in the interests of others, and everybody concerned. We cannot afford to leave Mysore in its present position, but it must expand. If it should expand, then I am going to suggest that the expansion can be on the basis of language,—language contiguous

groups joining Mysore ; that will be the future Mysore, call it what you will.

Sri B. V. NARAYANA REDDY.—Will you kindly cite the resolutions passed by the Mysore Congress Committee ? You seem to be saying that you were once the General Secretary. I think that a resolution that Mysore as an integral part of Kannada country should be formed, was passed by the Mysore Congress.

Sri K. PATT BHIRAMAN.—There is Birur Resolution reiterating it and what is more, there is the Resolution that is passed at the Congress meeting presided over by the then President, Sri K. Chengalaraya Reddy. Please read the report signed first by three, then by five, where all these resolutions were reiterated. All that is to be found here and I may also add that, as General Secretary, my memory was a bit strong.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಮ್ಮ ನಿಲುವು ಹೀಗೆ ಇದೆಯೆಂದು ತಾವು ಇಷ್ಟೊಂದು ಸ್ಪಷ್ಟವಾಗಿ ಇಲ್ಲಿಯವರೆಗೂ ತಿಳಿಸಿರಲಿಲ್ಲ.

ಶ್ರೀ ಕೆ. ಪಟ್ಟಾಭಿರಾಮನ್.—ಅದು ತಮ್ಮ ಮನಸ್ಸಿನ ಒಂದು ಚಪಲ. ನಾನು ಈ ಬಗ್ಗೆ ನನ್ನ ಅಭಿಪ್ರಾಯವೇನಿದೆಯೆಂಬುದನ್ನು ಬಹಳ ಸ್ಪಷ್ಟವಾಗಿ ಹೊರಗೆಡವಿದ್ದೇನೆ.— ಈ ಭಾಷಾ ಆಧಾರದ ಮೇಲೆ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡತಕ್ಕ ಬಗ್ಗೆ ನನ್ನ ಅಭಿಪ್ರಾಯವೇನಿರುತ್ತದೆ ಎನ್ನತಕ್ಕ ಬಗ್ಗೆ ಈ ಹಿಂದೆ ಆ ಆಂಧ್ರ ಮಸೂದೆ ಇಲ್ಲಿ ಚರ್ಚೆಗೆ ಬಂದದ್ದಂಥ ಕಾಲದಲ್ಲೇ ಸ್ಪಷ್ಟಪಡಿಸಿದ್ದೇನೆ. ನಮ್ಮ ಶ್ರೀಮಾನ್ ನಾರಾಯಣರೆಡ್ಡಿಯವರು ಈ ದೇಶದಲ್ಲಿ ಏಕ ಭಾಷಾ ಪ್ರಾಂತ್ಯವನ್ನು ನಿರ್ಮಾಣ ಮಾಡುತ್ತೇವೆಂದು ಅವರೇನಾದರೂ ಭಾವಿಸಿದ್ದರೆ ಅದು ಅವರ ಒಂದು ಹುಚ್ಚೆಂದು ಹೇಳುತ್ತೇನೆ.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಹಾಗಾದರೆ ನೀವು ಈಗ ಆ ಹುಚ್ಚರ ರಾಜ್ಯದಲ್ಲಿ ಸೇರಬೇಕೆಂದು ಆಯಿತಲ್ಲವೇ!

ಶ್ರೀ ಕೆ. ಪಟ್ಟಾಭಿರಾಮನ್.—ನಾನು ಆ ರೀತಿ ವರ್ತಿಸಲು ಅವಕಾಶವಿಲ್ಲ. ಆದರೆ ನಾನು ಇಷ್ಟಪಟ್ಟರೆ ಶ್ರೀಮಾನ್ ನಾಗಯ್ಯರೆಡ್ಡಿಯವರಿಗೆ ಹಿಡಿದಿರುವ ಹುಚ್ಚನ್ನು ಬಿಡಿಸಬಲ್ಲೆ. ಈ ಭರತಖಂಡದಲ್ಲಿ ಏಕ ಭಾಷಾವಾರು ಪ್ರಾಂತ್ಯ ನಿರ್ಮಾಣ ಮಾಡುವುದಕ್ಕೆ ಎಂದಿಗೂ ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಹತ್ತಾರುವರ್ಷಗಳಿಂದ, ನೂರಾರು ವರ್ಷಗಳಿಂದ ಒಂದು ಭಾಷೆಯನ್ನಾಡತಕ್ಕ ಜನರು ಮತ್ತೊಂದು ಭಾಷೆಯನ್ನಾಡತಕ್ಕ ಜನರ ನಾಡಿನಲ್ಲಿ ಮನೆಮಠಗಳನ್ನೂ ಆಸ್ತಿಪಾಸ್ತಿಗಳನ್ನೂ ಮಾಡಿಕೊಂಡು ಜೀವನ ಮಾಡಿಕೊಂಡು ಬರುತ್ತಿದ್ದಾರೆ.

Sri K. S. VASAN.—It is always good for the re-distribution of the States on the basis of languages. When the Andhra State Bill was discussed here last year he said that he would not at any cost advocate linguistic re-distribution of provinces.

Mr. SPEAKER.—You please hear him

ಶ್ರೀ ಕೆ. ಪಟ್ಟಾಭಿರಾಮನ್.—ಈ ಭಾಷಾವಾರು ಪ್ರಾಂತ್ಯ ನಿರ್ಮಾಣದ ಬಗ್ಗೆ ನನ್ನ ಅಭಿಪ್ರಾಯಗಳೇನೆಂಬುದನ್ನು ನಾನು ಈ ಹಿಂದೆ ಈ ಸಭೆಯ ಮುಂದೆ ಆ ಆಂಧ್ರ ಸಂಸ್ಥಾನ ಪ್ರಾರಂಭವಾಗತಕ್ಕ ಕಾಲದಲ್ಲಿ ಚರ್ಚೆ ಬಂದದ್ದಂಥ ಆ ಮಸೂದೆಯ ಸಂಬಂಧವಾಗಿ ಮಾತನಾಡುವಾಗ ಸ್ಪಷ್ಟಪಡಿಸಿದ್ದೇನೆ. ಆ ದಿವಸ ನಾನು ಹೇಳಿರತಕ್ಕ ಮಾತುಗಳನ್ನು ಬದಲಾಯಿಸಲಿಕ್ಕಾಗಲಿ ಅಥವಾ ಅವುಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕಾಗಲಿ ಕಾರಣವೇ ಇಲ್ಲ. ಈ ಕೇವಲ ಒಂದು ಭಾಷೆಯ ಆಧಾರದಮೇಲೆ ಒಂದು ರಾಜ್ಯವನ್ನು ಕಟ್ಟುವುದಕ್ಕೆ ಹೋಗಲು ಈ ದಿವಸ ಅದು ಸಾಧ್ಯವಿಲ್ಲ. ಒಂದೇಒಂದು ಭಾಷೆಯನ್ನು ಮಾತನಾಡತಕ್ಕ ಜನರೆಲ್ಲರನ್ನೂ ನಾವು ಎಷ್ಟೇ ಒಟ್ಟುಗೂಡಿಸುತ್ತೇವೆಂದು ಹೇಳಿದರೂ ಆ ಪ್ರದೇಶದಲ್ಲಿ ಬೇರೆ ಬೇರೆ ಭಾಷೆಗಳನ್ನಾಡತಕ್ಕ ಜನರು ಇದ್ದೇ ಇರುತ್ತಾರೆ. ಈ ದಿವಸ ನಾವು ಯಾವಯಾವ ಭಾಗಗಳು ಈ ಕನ್ನಡ ಪ್ರಾಂತ್ಯಕ್ಕೆ ಸೇರಬೇಕೆಂದು, ಕನ್ನಡಿಗರಿಗೆ ಸೇರತಕ್ಕ ಪ್ರದೇಶವೆಂದು ಹೇಳುತ್ತೇವೋ ಅಲ್ಲಿ ಅಲ್ಪಸ್ವಲ್ಪವಾದರೂ ಇತರ ಭಾಷೆಗಳನ್ನಾಡತಕ್ಕ ಜನರು ಇದ್ದೇ ಇರುತ್ತಾರೆ. ಈಗಾಗಲೇ ನಾವು ನಮ್ಮ ಮೈಸೂರು ಸಂಸ್ಥಾನದಲ್ಲಿ ಪ್ರಾಧಾನ್ಯವಾದ ಹದಿನಾಲ್ಕು ಭಾಷೆಗಳು ಚಲಾವಣೆಯಲ್ಲಿರುತ್ತವೆಂದು ಒಪ್ಪಿಕೊಂಡಿದ್ದೇವೆ. ಅದೇ ನಮ್ಮ ಮೈಸೂರಿನ ಒಂದು ವಿಶೇಷವಾದಂಥ ವೈಶಿಷ್ಟ್ಯ ಎಂದು ಹೇಳುತ್ತೇವೆ. ಇದನ್ನೇ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಆ ದಿವಸ ಸಭೆಯಮುಂದೆ ತಿಳಿಸಿದ್ದಾರೆ. ಹಾಗೆ ಮಾನ್ಯ ಮುಖ್ಯ ಮಂತ್ರಿಗಳು ಆ ದಿವಸ ಏನು ಹೇಳಿದ್ದಾರೋ ಅದನ್ನೇ ನಾನೂ ಕೂಡ ಈಗ ಮತ್ತೊಮ್ಮೆ ಒತ್ತಿ ಹೇಳುತ್ತಿದ್ದೇನೆ. ಆ ದಿವಸ ಮಾನ್ಯ ಮಂತ್ರಿಗಳು ಮಾತನಾಡುತ್ತ ನಮ್ಮ ಮೈಸೂರು ಸಂಸ್ಥಾನ it is a composite State ಎಂದು ಹೇಳಿದರು. ಅಂದರೆ ಅನೇಕ ಭಾಷೆಗಳನ್ನಾಡತಕ್ಕ ಜನಗಳು ಸೇರಿಕೊಂಡಿರುವಂಥ ಒಂದು ದೇಶ ಎಂದು ಹೇಳಿ ಇಂಥ ಒಂದು ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಎಂದಿಗೂ ಸಾಧ್ಯವಾಗುವುದಿಲ್ಲ ಎಂದು ಹೇಳಿದರು. ಈ ಒಂದು ಕಾರಣದಮೇಲೆ ಆ ದಿವಸ ಅವರು ಮೈಸೂರು ಸಂಸ್ಥಾನ ಮೈಸೂರು ಸಂಸ್ಥಾನವಾಗಿಯೇ ಉಳಿಯಬೇಕು ಎಂದು ಕೂಡ ಹೇಳಿದ್ದಾರೆ. ಈಗ ನಾವು ಈ ಒಂದು ಅಂಶವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ನಮ್ಮ ಮೈಸೂರು ಸಂಸ್ಥಾನವನ್ನು ಒಂದು ಕನ್ನಡ ರಾಜ್ಯವನ್ನಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಅಥವಾ ಇಲ್ಲವೇ ಎನ್ನತಕ್ಕ ಬಗ್ಗೆ ಮಾನ್ಯ ಸದಸ್ಯರುಗಳಾದ ತಾವೆಲ್ಲರೂ ತಮ್ಮ ತಮ್ಮೊಳಗೇ ಈ ಪ್ರಶ್ನೆಯನ್ನೂ ಹಾಕಿಕೊಳ್ಳಿ. ಆಗ ಈ ಒಂದು ಕೋಟಿ ಪ್ರಜಾಸಂಖ್ಯೆಯಿರತಕ್ಕ ಈ ಮೈಸೂರು ಸಂಸ್ಥಾನ ಆಡಳಿತದ ದೃಷ್ಟಿಯಿಂದ ಇದಿನ್ನೂ ಮುಂದುವರಿಯುವುದಾದರೆ, ಇದಿನ್ನೂ ವಿಸ್ತಾರವಾಗುವುದಾದರೆ ಇದನ್ನು ಬೇಡ ಎಂದು ಹೇಳುವುದಕ್ಕಾಗುವುದಿಲ್ಲವೆಂದು ತಮಗೆ ಗೊತ್ತಾಗುತ್ತದೆ. ಈಗ ಯುನೈಟೆಡ್ ಪ್ರಾವಿನ್ಸಸ್‌ಗಳಲ್ಲಿ ಬರಿ ಹಿಂದಿ ಭಾಷೆಯೊಂದೇ ಪ್ರಾಧಾನ್ಯ ಭಾಷೆಯಾಗಿದ್ದು ಅಲ್ಲಿ ಎಂಟುಕೋಟಿ ಜನಸಂಖ್ಯೆಯಿದ್ದರೂ ಅದನ್ನು ಒಂದು

(ಶ್ರೀ ಕೆ. ಪಟ್ಟಾಭಿರಾಮನ್.)

ಯೂನಿಟ್ಟನ್ನಾಗಿ ಮಾಡುವುದಕ್ಕಾಗುವುದಿಲ್ಲ, ಆಡಳಿತದ ಸೌಕರ್ಯಕ್ಕಾಗಿ Administrative purposes ಗಾಗಿ ಅದನ್ನು ಒಡೆದು ಮೂರು ನಾಲ್ಕು ಬೇರಬೇರೆ ಆಡಳಿತದ ಯೂನಿಟ್ಟುಗಳನ್ನಾಗಿ ಮಾಡಬೇಕೆಂದು ಹೇಳಿದ್ದಾರೆ. ಹೀಗೆ ಆಡಳಿತ ದೃಷ್ಟಿಯಿಂದಲೂ ವಿಭಾಗಮಾಡತಕ್ಕ ಅಥವಾ ಕೆಲಕೆಲವನ್ನು ಒಟ್ಟುಕೂಡಿಸತಕ್ಕ ಸಂದರ್ಭಗಳೂ ಇರುತ್ತವೆ. ಈಗ ನಮ್ಮ ಸಂಸ್ಥಾನ ಹಾಗೆ ಹೆಚ್ಚು ವಿಸ್ತಾರವಾಗುವುದಕ್ಕೆ ಅಥವಾ ಹಾಗೆ ಬೆಳೆಯುವುದಕ್ಕೆ ಪ್ರತಿಯೊಂದು ದಿಕ್ಕಿನಲ್ಲೂ ಅವಕಾಶವಿಲ್ಲ. ಪೂರ್ವಕ್ಕೆ ಬೆಳೆಯಲು ಆಗುವುದಿಲ್ಲ. ಇನ್ನು ಪಶ್ಚಿಮಕ್ಕೆ ಬೆಳೆಯಬೇಕಾಗುತ್ತದೆ. ಹಾಗೆ ಮಾಡುವುದರಿಂದ ಏನೊಂದು ಹೆಚ್ಚಿನ ಪ್ರಯೋಜನವಾಗುತ್ತದೆಂಬುದನ್ನು ನೋಡೋಣ. ನಮಗೆ ಇದು ವ್ಯಾಪಾರ ದೃಷ್ಟಿಯಿಂದ ಬಹಳ ಅನುಕೂಲವಾಗುತ್ತದೆ. ಆದರೆ ಶ್ರೀ ಕೆ. ಪುಟ್ಟಸ್ವಾಮಿಯವರು ಮಾತನಾಡುತ್ತಾ ಯಾವುದೋ ಒಂದುರೀತಿಯಾಗಿ ಇದಕ್ಕೆ ಒಂದು ಜವಾಬನ್ನು ಕೊಟ್ಟಿದ್ದಾರೆ. ಇದು ಕೇಂದ್ರಕ್ಕೆ ಸಂಬಂಧಪಟ್ಟ ವಿಚಾರ ಎಂದು ಹೇಳಿದ್ದಾರೆ. ಆ ಮಾತು ಹಾಗಿರಲಿ. ಈಗ ನಮಗೆ ಆ ಪಶ್ಚಿಮ ದಿಕ್ಕಿನ ರೇವುಗಳು ಸೇರಿದರೆ ಆಗ ನಮ್ಮ ವ್ಯಾಪಾರೋದ್ಯಮಗಳು-ಪಾಶ್ಚಾತ್ಯ ರಾಷ್ಟ್ರಗಳ ಸಂಬಂಧ ಉಂಟಾಗಿ ಯೂರೋಪ್ ಮತ್ತು ಅಮೆರಿಕಾಗಳೊಡನೆ ವ್ಯವಹಾರ ಬೆಳೆಸಲು ನಮ್ಮ ಮೈಸೂರಿಗೆ ಒಂದು ಹೆಚ್ಚಿನ ಅವಕಾಶ ಸಿಕ್ಕುತ್ತದೆ. ಹಾಗೆ ಒಂದು ಸೌಲಭ್ಯ ನಮ್ಮ ಆಡಳಿತಕ್ಕೊಳಪಟ್ಟು ನಮ್ಮ ಆಡಳಿತದ ಚೌಕಟ್ಟಿನೊಳಗೆ ಇರತಕ್ಕಂಥಾದ್ದು ಒಳ್ಳೆಯದಲ್ಲವೇ ಎನ್ನುವುದನ್ನೂ ಕೂಡ ನಾವೀಗ ಆಲೋಚನೆ ಮಾಡಬೇಕಾಗಿದೆ. ನಾವು ಭಟ್ಕಲ್ ರೇವಿನ ವಿಚಾರವನ್ನೇ ತೆಗೆದುಕೊಳ್ಳೋಣ. ಹತ್ತಾರು ವರ್ಷಗಳ ಹಿಂದೆ ಇದನ್ನು ಪಡೆಯತಕ್ಕ ಬಗ್ಗೆ ಅನೇಕ ಮಹಾ ಪ್ರಯತ್ನಗಳನ್ನು ನಮ್ಮವರು ನಡೆಸಿದರು. ಆಗ ಅವರು ನಮ್ಮ ದೇಶಕ್ಕೆ ಇಂಥ ಒಂದು ರೇವಿನ ಸಹಾಯವಾಗಬೇಕು, ಅದು ನಮ್ಮ ಆಡಳಿತದ ಚೌಕಟ್ಟಿನೊಳಗೇ ಇರಬೇಕು, ನಾವು ಆ ಕೊಚಿನ್ ಇತ್ಯಾದಿ ಸ್ಥಳವನ್ನು ಕೇಳುವುದಕ್ಕಾಗುವುದಿಲ್ಲ ನಮ್ಮ

5 P.M.

ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕು, ಅದಕ್ಕೆ ಒಂದು ರೇವು ಪಟ್ಟಣಬೇಕು ಎಂದು ಹೇಳಿದ್ದಾರೆ. ಭಾಷೆಗೆ ಪ್ರಾಧಾನ್ಯತೆ ಕೊಡದೆ, ಕೊಚ್ಚಿನ್ ರೇವು ಪಟ್ಟಣವನ್ನು ಸೇರಿಸಿಕೊಳ್ಳುವುದಕ್ಕಾಗುತ್ತದೆಯೇ ? ಇಂಥ ಸಂದರ್ಭದಲ್ಲಿ ಭಾಷೆಗೆ ಪ್ರಾಧಾನ್ಯತೆ ಕೊಟ್ಟು ಮಂಗಳೂರು ರೇವು ಪಟ್ಟಣವನ್ನು ಸೇರಿಸಿಕೊಳ್ಳಬಹುದು. ಆದ್ದರಿಂದ ಒಂದುವೇಳೆ ನಮಗೆ ರೇವುಪಟ್ಟಣ ಬೇಕಾದರೆ, ಮೈಸೂರು ವಿಸ್ತಾರವಾಗಬೇಕು ಮತ್ತು ವಿಸ್ತಾರವಾಗುವುದು ಅಗತ್ಯ, ಇಲ್ಲದಿದ್ದರೆ, ಮಲೆಯಾಳ ಮಾತನಾಡತಕ್ಕ ಕೊಚ್ಚಿನ್ ರೇವು ಪಟ್ಟಣ ಸೇರಿಸಿಕೊಳ್ಳುವುದಕ್ಕಾಗುವುದಿಲ್ಲ. ಆಡಳಿತ ದೃಷ್ಟಿಯಿಂದ ಹೀಗೆ ಬೇರೆ ಭಾಗಗಳನ್ನು ಮೈಸೂರಿಗೆ ಸೇರಿಸುವುದಾದರೆ, ಮೈಸೂರು ಮೈಸೂರಾಗಿಯೇ ಉಳಿಯಬೇಕು. ಇತರ ಭಾಗಗಳನ್ನು ಸೇರಿಸಕೂಡದು ಎಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಕಾವೇರಿ ನದಿಯನ್ನು ಒಂದು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಮೈಸೂರಿನ ಸಂಪತ್ತು, ಮೈಸೂರಿನ ಸರ್ವವಿಧವಾದ ಶ್ರೇಯಸ್ಸೆಲ್ಲಾ ಕಾವೇರಿಯ ನದಿಯಮೇಲೆ ಆಧಾರವಾಗಿದೆ ಎಂಬುದು ನಿರ್ವಿವಾದವಾದುದು. ಕಾವೇರಿ ನದಿಯ ನೀರಿನ ಹಂಚಿಕೆಯ ವಿಚಾರದಲ್ಲಿ ಎಷ್ಟು ಬಾರಿ ಭಾರಿ ಸಮಸ್ಯೆಗಳೂ ತೊಡಕುಗಳೂ ಬರುತ್ತವೆ ಎಂಬುದು ತಮಗೆಲ್ಲಾ ಗೊತ್ತಿದೆ. ಮೈಸೂರು ಸರ್ಕಾರದವರು, ಮದರಾಸ್ ಸರ್ಕಾರದವರು ಈ ನೀರಿನ ಹಂಚಿಕೆಯ ವಿಚಾರವನ್ನು ಕೇಂದ್ರ ಸರ್ಕಾರದವರ ಮುಂದೆ ತೆಗೆದುಕೊಂಡು ಹೋಗಿ ಆ ಸಮಸ್ಯೆಯನ್ನು ಪರಿಹಾರ ಮಾಡಬೇಕಾಗಿದೆ. ಹಾಗೆಯೇ ತುಂಗಭದ್ರಾ ನದಿಯನ್ನು ತೆಗೆದುಕೊಳ್ಳೋಣ ; ಬಳ್ಳಾರಿ ಭಾಗ ನಮಗೆ ಬಂದಿದೆ. ಅಲ್ಲಿ ಕೋಟ್ಯಂತರ ರೂಪಾಯಿಗಳು ಖರ್ಚುಮಾಡುವ ಯೋಜನೆಗಳು ಬೇಕಾದಷ್ಟು ಇವೆ. ಸಾಧ್ಯವಾದಷ್ಟು ಒಂದೇ ಆಡಳಿತದ ಕೆಳಗೆ ಈ ನದಿ ಬಂದಿದ್ದರೆ, ಆಗ, ಇಂಥ ಸಮಸ್ಯೆಗಳು ಉದ್ಭವವಾಗುತ್ತಿರಲಿಲ್ಲ.

Mr. SPEAKER.—May I know how long you will take ?

Sri K. PATTABHIRAMAN.—I will continue tomorrow, Sir, Because, I have got an engagement today at 5-30, and I do not want to disappoint them. If you will permit me, I will continue for half-an-hour tomorrow.

Mr. SPEAKER.—The House will now rise and meet at 12 o'clock tomorrow.

The House adjourned at Five Minutes past Five of the Clock to meet again on Wednesday, the 20th April 1955 at Twelve of the Clock.

WD 4508—GPB—550—3-10-55